


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 08 Issue : 09 Thursday 11-09-2025 E-mail : maruti.b.hosamani76@gmail.com Page: 4 Price : Rs. 1/-


## ಸೂಕ್ಷ್ಮವಾದ ಮಾನಸಿಕ ವಿದ್ಯಮಾನವೇ ಕಾವ್ಯ – ಖ್ಯಾತ ಇತಿಹಾಸ ಸಂಶೋಧಕ ಡಾ. ಬಿ.ರಾಜಶೇಖರಪ್ಪ





**ಸಿಹಿ ಕಹಿ ಸುದ್ದಿ,**

**ಚಿತ್ರದುರ್ಗ:**ಕಾವ್ಯಓದಿದಾಗಅದರಚಿತ್ರಮರು ಮೂಡಬೇಕು. ಸೂಕ್ಷ್ಮವಾದ ಮಾನಸಿಕ ವಿದ್ಯಮಾನವೇ ಕಾವ್ಯ ಎಂದು ಚಿತ್ರದುರ್ಗದ ಖ್ಯಾತ ಇತಿಹಾಸ ಸಂಶೋಧಕರಾದ ಡಾ, ಬಿ.ರಾಜಶೇಖರಪ್ಪ ತಿಳಿಸಿದರು.

ಚಿನ್ಮೂಲದ್ರಿ ಸಾಹಿತ್ಯ ವೇದಿಕೆ ಮತ್ತು ರೋಟರಿ ಕ್ಲಬ್ ಚಿತ್ರದುರ್ಗ ಇವುಗಳ ಸಹಯೋಗದಲ್ಲಿ ನಗರದ ಪತ್ರಿಕಾ ಭವನದಲ್ಲಿ ಚಿನ್ಮೂಲದ್ರಿ ಸಾಹಿತ್ಯವೇದಿಕೆಯ19ನೇ.ವಾರ್ಷಿಕೋತ್ಸವ ಹಾಗೂ ವೈದ್ಯೆ ಡಾ, ಆರ್ ಗೌರಮ್ಮನವರ ಚೊಚ್ಚಲ ಕೃತಿ "ಕಾವ್ಯದೀಪ" ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಕೃತಿಯ ಕುರಿತು ಪರಿಚಯ ಮಾಡುತ್ತ ಮಾತನಾಡಿದರು.

ಸಾಹಿತ್ಯ ಯಾರಿಗೂ ಮೀಸಲಲ್ಲ. ಅದು ಎಲ್ಲರಿಗೂ ಸೇರಿದ್ದು. ಡಾ, ಆರ್ ಗೌರಮ್ಮನವರು ಪ್ರಾಸದ ತ್ರಾಸವಿಲ್ಲದೆ ಭಾವನಿಷ್ಠಾವಾಗಿ ಅತ್ಯಂತ ಸೊಗಸಾಗಿ ಕವನಗಳನ್ನು ರಚಿಸಿದ್ದಾರೆ ಎಂದು ಅವರನ್ನು ಶ್ಲಾಘಿಸಿದರು.



ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು,101ಬಾರಿರಕ್ತದಾನಿ ಖ್ಯಾತಿಯ ಡಾ, ಟಿ.ತ್ಯಾಗರಾಜ್ ಕೃತಿ ಬಿಡುಗಡೆ ಗೊಳಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪ ವಿಭಾಗಾಧಿಕಾರಿ ಮೆಹಬೂಬ್ ಜಿಲಾನಿ ಖುರೇಶಿ, ಚಿನ್ಮೂಲದ್ರಿ ಸಾಹಿತ್ಯ ವೇದಿಕೆಯ ಗೌರವಾಧ್ಯಕ್ಷರಾದ ಬಿ.ಕೆ ರಹಮತ್ ವುಲ್ಲಾ, ಹಿರಿಯ ಪತ್ರಕರ್ತರಾದ ಜಿ.ಎಸ್ ಉಜ್ಜಿನಪ್ಪ, ಉಡುಪಿಯ ಚನ್ನಬಸವ ಪುತ್ತೂರ್ಕರ್, ಜಿ.ಎನ್ ಮಲ್ಲಿಕಾರ್ಜುನ, ಡಾ, ಆರ್ ಗೌರಮ್ಮ, ಗಾಯತ್ರಿ ಶಿವರಾಂ, ಶಫೀವುಲ್ಲಾ, ಮಾತನಾಡಿದರೆ ಚಿತ್ರದುರ್ಗ ರೋಟರಿ ಕ್ಲಬ್ ನ ಅಧ್ಯಕ್ಷರಾದ ದಿಲ್ ಶಾದ್ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಚಿನ್ಮೂಲದ್ರಿ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ದಯಾವತಿ ಪುತ್ತೂರ್ಕರ್ ಮಾತನಾಡಿದರೆ ಮಮತಾ ಕೆ.ಎಚ್ ಪ್ರಾರ್ಥಿಸಿದರು.

ಡಾ, ನವೀನ್ ಬಿ.ಸಜ್ಜನ್ ಸ್ವಾಗತಿಸಿದರೆ ಮಹಮದ್ ಸಾದತ್ ವಂದಿಸಿದರು. ಆಕಾಶವಾಣಿಯ ಡಾ, ನವೀನ್ ಮಸ್ಕಲ್ ಸೊಗಸಾಗಿ ನಿರೂಪಿಸಿದರು.

ಸಮಾರಂಭದಲ್ಲಿ ಶಿವರುದ್ರಮ್ಮ, ಕೆ.ಎಸ್ ತಿಪ್ಪಮ್ಮ, ಉಷಾರಾಣಿ, ಶಾರದಾ ಜೈರಾಮ್, ವಿನಾಯಕ, ಬೆಳಕುಪ್ರಿಯ ಡಾ, ಬಸವರಾಜ್ ಹರ್ತಿ, ಯತೀಶ್.ಎಂ ಸಿದ್ದಾಪುರ, ಸತೀಶ್ ಕುಮಾರ್, ತಿಪ್ಪೀರಮ್ಮ ಸಕಲಾಪುರದಟ್ಟಿ, ಶೋಭಾ, ಮೀರಾ ನಾಡಿಗ್, ಮುರಳೀಧರ್ ಬಿ.ವೇದಮೂರ್ತಿ ಸೇರಿದಂತೆ ಕವಯಿತ್ರಿ ಗೌರಮ್ಮನವರ ಕುಟುಂಬದವರು ಮತ್ತು ಸಾಕಷ್ಟು ಸಂಖ್ಯೆಯ ಸಾಹಿತ್ಯಾಸಕ್ತರು ಭಾಗ ವಹಿಸಿದ್ದರು.

**ವರದಿ :**

**ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

## 'ಸುಳಿ' ಆಡಿಯೋ ಮತ್ತು – ಟ್ರೈಲರ್ ಬಿಡುಗಡೆ

**ಸಿಹಿ ಕಹಿ ಸುದ್ದಿ,**

**ಬೆಂಗಳೂರು :** ಸಹಸ್ರ ಕೋಟಿ ಮೂವೀ ಎಂಟರ್ಟೈನ್ಮೆಂಟ್ ಅರ್ಪಿಸುವ "ಸುಳಿ" ಕನ್ನಡ ಚಲನ ಚಿತ್ರದ ಆಡಿಯೋ ಮತ್ತು ಟ್ರೈಲರ್ ಬಿಡುಗಡೆಯ ಸಮಾರಂಭ ಮಲ್ಲೇಶ್ವರಂ ನ ರೇಣುಕಾಂಬ ಸ್ಟುಡಿಯೋದಲ್ಲಿ ಜರುಗಿತು.



ಮುಖ್ಯ ಅತಿಥಿಗಳಾಗಿ ಸಾಹಿತಿ, ಮಾಜಿ ವಿಧಾನಸಭಾ ಸದಸ್ಯರು, ಮಾಜಿ ಸಚಿವರೂ ಆದ ಬಿ.ಟಿ.ಲಲಿತಾ ನಾಯಕ್, ನಾಯಕ ನಟಿ ಭವ್ಯ, ಸುಚೇಂದ್ರ ಪ್ರಸಾದ್ ಆಗಮಿಸಿ ಆಡಿಯೋ ಮತ್ತು ಟ್ರೈಲರ್ ಬಿಡುಗಡೆ ಮಾಡಿ ಚಿತ್ರ ತಂಡಕ್ಕೆ ಶುಭ ಕೋರಿದರಲ್ಲದೆ ಮಹಿಳಾ ನಿರ್ದೇಶಕಿ ರಶ್ಮೀ ಅವರ ಕುರಿತು ಮೆಚ್ಚುಗೆ ಮಾತುಗಳನ್ನಾಡಿದರು.

ಶ್ರೀ ಕಬ್ಬಾಳಮ್ಮನ ಮಹಿಮೆ 'ಮನೆ' ಮತ್ತು 'ಬ್ಯಾಂಕ್ ಲೋನ್' 'ಸುಮ' ಚಿತ್ರದ ನಿರ್ದೇಶಕರಾದ ರಶ್ಮಿ ಎಸ್ ರವರು ಈ ಚಿತ್ರದ ನಿರ್ದೇಶನ ಮಾಡಿದ್ದು ಇದು ಪವಳಕಾಯಿ ಕಾದಂಬರಿ ಆಧಾರಿತ ಚಿತ್ರವಾಗಿದ್ದು, ಮೂಲ ಚಿನ್ನಪ್ಪ ಭಾರತಿಯವರು ಬರೆದಿರುವ ತಮಿಳಿನ ಪವಳಾಯಿ, ಮತ್ತು ಕನ್ನಡಕ್ಕೆ ಅದೇ ಹೆಸರಿನಲ್ಲಿ ಅನುವಾದ ಮಾಡಿರುವ ಡಾ, ಕೆ.ಪದ್ಮನಾಭ ಉಡುಪ ಅವರದ್ದಾಗಿದೆ. ಈ ಚಿತ್ರದ ಕಥೆಯು 1970 ನೇ. ಇಸವಿಯಲ್ಲಿ ನಡೆಯುವ ಕಥಾ ಹಂದರವಿದ್ದು ಇಡೀ ಚಿತ್ರದ ಕಥೆಯು ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತದೆ. ಇದು ಮಹಿಳಾ ಪ್ರಧಾನ ಚಿತ್ರವಾಗಿದ್ದು ಪ್ರತಿಯೊಬ್ಬ ವ್ಯಕ್ತಿಯು ಜೀವನವೆಂಬ ಸುಳಿಯಲ್ಲಿ ಸಿಲುಕಿದ ಮೇಲೆ ಅದೆಲ್ಲ ಸುಳಿಗಳಿಂದ ಹೇಗೆ ಮುಕ್ತಿ ಪಡೆಯುತ್ತಾನೆ? ಹೇಗೆ ಎಲ್ಲಾ ಸಂಬಂಧಗಳನ್ನು ನಿಭಾಯಿಸುತ್ತಾನೆ? ಎಂಬುದೇ ಚಿತ್ರದ ಕಥಾಹಂದರ.

ಚಿತ್ರದಲ್ಲಿ ಕಲಾವಿದರಾದ ಸನತ್ ಚೈತ್ರ, ಪಿ.ಸಂಜನಾ ನಾಯ್ಡು, ಶಿವಕುಮಾರ್ ಆರಾಧ್ಯ, ಶಂಕರ್ ನಾರಾಯಣ್, ಕಾವ್ಯ ಪ್ರಕಾಶ್, ಮಂಡ್ಯ ಸಿದ್ದು, ಹರಿಹರನ್ ಬಿ.ಪಿ, ಮೊದಲಾದವರ ತಾರಾಗಣವಿದೆ. ಮಂಡ್ಯ, ಮದ್ದೂರು, ರಾಮನಗರದ ಸುತ್ತಮುತ್ತ ಒಟ್ಟು 25 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಎರಡು ಹಾಡುಗಳಿದ್ದು. ಎನ್.ರಾಜು ಸಂಗೀತ ನಿರ್ದೇಶನ, ಹಿನ್ನೆಲೆ ಸಂಗೀತ ಶಿವಸತ್ಯ ಅವರದಿದೆ. ವಿಕ್ರಂ ಯೋಗಾನಂದ್ ದೇವೂ ಛಾಯಾಗ್ರಹಣ, ಸಂಕಲನ ಮುತ್ತುರಾಜ.ಟಿ ಸಾಹಿತ್ಯ ಸತೀಶ್ ಜೋಶಿ ಹಾವೇರಿ, ಸಂಭಾಷಣೆ ಆರಾಧ್ಯ ಮುತ್ತುರಾಜು.ಟಿ ಪತ್ರಿಕಾ ಸಂಪರ್ಕ ಕಾರ್ತಿಕ್ ಸುಧನ್, ಡಾ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ, ಪ್ರಚಾರಕಲೆ ದೇವೂ, ನಿರ್ಮಾಣ ನಿರ್ವಹಣೆ ಹರಿಹರನ್ ಬಿ ಪಿ ಅವರದ್ದಾಗಿದೆ. ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ಚಿಕ್ಕಹೊಸಗಾವಿಯ ಬೆಟ್ಟಸ್ವಾಮಿ ಗೌಡರವರು (ಬಿ.ಎಸ್ ಗೌಡ) ಈ ಚಿತ್ರದ ನಿರ್ಮಾಪಕರಾಗಿದ್ದಾರೆ. ಸದ್ಯ ಇದೆ ತಿಂಗಳು ನಡೆಯುತ್ತಿರುವ ಮೈಸೂರು ದಸರಾ ಚಲನ ಚಿತ್ರೋತ್ಸವ–2025 ಕ್ಕೆ 'ಸುಳಿ' ಚಿತ್ರ ಆಯ್ಕೆ ಆಗಿದ್ದು ಚಿತ್ರ ತಂಡಕ್ಕೆಲ್ಲ ಖುಷಿ ತಂದಿದೆ ಎಂದು ನಿರ್ದೇಶಕಿ ರಶ್ಮಿ ಎಸ್ ಹೇಳಿದರು.

**ಡಾ, ಪ್ರಭು ಗಂಜಿಹಾಳ**

**ಮೊ–9448775346**

## ಗುಣಮಟ್ಟದ ಶಿಕ್ಷಣ ನೀಡುತ್ತಿರುವ ವಲಯದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಶಾಸಕ ಬಾಲಚಂದ್ರ ಜಾರಕಿಹೊಳಿ

**ಮೂಡಲಗಿ :** ಮೂಡಲಗಿ ವಲಯವು ಶೈಕ್ಷಣಿಕವಾಗಿ ಸುಧಾರಿಸುವಲ್ಲಿ ನಿರ್ಗಮಿತ ಬಿಇಓ ಅಜೀತ ಮನ್ನಿಕೇರಿ ಅವರ ಪಾತ್ರ ಗಣನೀಯವಾಗಿದ್ದು, ಈಗಿರುವ ಗುಣಮಟ್ಟದ ಶಿಕ್ಷಣವನ್ನು ಮುಂದುವರೆಸಿಕೊಂಡು ಹೋಗಲು ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ನೂತನ ಬಿಇಓ ಅವರಿಗೆ ಸಲಹೆ ಮಾಡಿದರು.



ಶನಿವಾರದಂದು ತಾಲ್ಲೂಕಿನ ತಿಗಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ಶಿಕ್ಷಕರ ದಿನಾಚರಣೆ ನಿಮಿತ್ತ ಜರುಗಿದ ಮೂಡಲಗಿ ತಾಲ್ಲೂಕು ಮಟ್ಟದ ಗುರುಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟ ದರ್ಜೆಯ ಶಿಕ್ಷಣ ನೀಡುತ್ತಿರುವ ವಲಯದ ಸಾಧನೆಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಮೊದಲು ಬರಡು ಭೂಮಿಯಂತಾಗಿದ್ದ ಶಿಕ್ಷಣವನ್ನು ನೀರಾವರಿ ಪ್ರದೇಶವನ್ನಾಗಿ ಮಾಡಿ ಉತ್ತಮ ಫಸಲು ಬರುವಂತೆ ಮಾಡಿರುವ ಕೀರ್ತಿ ಮನ್ನಿಕೇರಿ ಅವರಿಗೆ ಸಲ್ಲುತ್ತದೆ. ವಲಯದ ಫಲಿತಾಂಶಗಳು ರಾಜ್ಯದಲ್ಲೆಡೆ ಗುರುತಿಸುವಂತಾಗಿದೆ ಎಂದು ಹೇಳಿದರು.

ಸರ್ಕಾರಿ ಶಾಲೆಗಳೆಂದರೆ ಅಸೂಯೆ ಪಡುತ್ತಿರುವ ಇಂದಿನ ದಿನಗಳಲ್ಲಿ ಖಾಸಗಿ ಸಂಸ್ಥೆಗಳಿಗಿಂತ ಗುಣಮಟ್ಟದ ಶಿಕ್ಷಣಕ್ಕೆ ನಮ್ಮ ವಲಯವು ಭಾಜನವಾಗಿರುವುದು ಖುಷಿ ತರುತ್ತಿದೆ. ಎರಡು ಬಾರಿ ಕೇಂದ್ರ ಸರ್ಕಾರದ ಪ್ರಶಸ್ತಿಯನ್ನು ಬಾಚಿಕೊಂಡಿರುವದರ ಹಿಂದೆ ಮನ್ನಿಕೇರಿ ಅವರ ಶ್ರಮವಿದೆ. ನಮ್ಮ ವಲಯದಲ್ಲಿ 50 ಸಾವಿರಕ್ಕೂ ಹೆಚ್ಚಿನ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವುದು ರಾಜ್ಯದಲ್ಲಿಯೇ 3 ನೇ ಸ್ಥಾನವನ್ನು ಅಲಂಕರಿಸಿದೆ. ಶಿಕ್ಷಕರ ಸಂಘಟಿತ ಕಲಿಕೆಯಿಂದ ಇವೆಲ್ಲವನ್ನೂ ಮಾಡಲು ಸಾಧ್ಯವಿದೆ ಎಂದು ಅವರು ತಿಳಿಸಿದರು.

ತಿಗಡಿ ಗ್ರಾಮಸ್ಥರ ಒಗ್ಗಟ್ಟಿನ ಶಕ್ತಿಯಿಂದಾಗಿ ಶಿಕ್ಷಕರದಿನಾಚರಣೆಕಾರ್ಯಕ್ರಮವುಅತ್ಯಂತ ಯಶಸ್ವಿಯಾಗಿದೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಡಲು ಕಾರಣೀಕರ್ತರಾದವರನ್ನು ಅಭಿನಂದಿಸಿದ ಅವರು, ಶಿಕ್ಷಕರಿಗೆ ಗೌರವವನ್ನು ನೀಡಲು ಪ್ರತಿ ವರ್ಷವೂ ಶಿಕ್ಷಕರ ದಿನಾಚರಣೆಯನ್ನು ಅತೀ ಅದ್ದೂರಿಯಾಗಿ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಶಾಸಕನಾಗುವ ಪೂರ್ವದಲ್ಲಿ ಕೇವಲ 12 ಸರ್ಕಾರಿ ಪ್ರೌಢಶಾಲೆಗಳನ್ನು ಹೊಂದಿದ್ದ ವಲಯವು, ನಾನು ಈ ಭಾಗದ ಶಾಸಕನಾದ ನಂತರ ಹೊಸದಾಗಿ 28 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿಸಿದ್ದೇನೆ.ಇದರಿಂದಒಟ್ಟು40ಸರ್ಕಾರಿ ಪ್ರೌಢಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಅತೀ ಹೆಚ್ಚಿನ ಪ್ರಮಾಣದಲ್ಲಿ ವಿವಿಧ ವಸತಿ ಶಾಲೆಗಳು ನಮ್ಮ ವಲಯದಲ್ಲಿವೆ. ಪ್ರತಿ ವರ್ಷವೂ ವಸತಿ ಶಾಲೆಗಳ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ದರ್ಜೆಯ ಫಲಿತಾಂಶವನ್ನು ನೀಡುವ ಮೂಲಕ ವಲಯಕ್ಕೆ ಕೀರ್ತಿ ತರುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಹಳ್ಳೂರ, ತುಕ್ಕಾನಟ್ಟಿ ಮತ್ತು ಖಂಡ್ರಟ್ಟಿ ಗ್ರಾಮಗಳ ಸಾರ್ವಜನಿಕರ ಬೇಡಿಕೆಯಂತೆ ಪ್ರಸಕ್ತ ವರ್ಷದಿಂದ ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಆರಂಭಿಸಲಾಗಿದೆ. ಇದು ಷರತ್ತುಬದ್ಧವಾಗಿದ್ದು, ಇಲಾಖೆಯ ಎಲ್ಲ ಷರತ್ತುಗಳಿಗೆ ಒಪ್ಪಿಕೊಂಡ ಬಳಿಕವೇ ಈ ಮೂರು ಗ್ರಾಮಗಳಿಗೆ ಪ್ರೌಢಶಾಲೆಗಳು ಮಂಜೂರಾಗಿವೆ.ಮೂರುವರ್ಷಗಳಶಿಕ್ಷಕರ ವೇತನವೂ ಸೇರಿದಂತೆ ಅಗತ್ಯವಿರುವ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುತ್ತೇನೆಂದು ಶಾಲಾ ಶಿಕ್ಷಣ ಇಲಾಖೆಗೆ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕಿರುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಶಾಸಕಬಾಲಚಂದ್ರಜಾರಕಿಹೊಳಿಯವರನ್ನು ತಿಗಡಿ, ಹಳ್ಳೂರ ಮತ್ತು ಖಂಡ್ರಟ್ಟಿ ಗ್ರಾಮಗಳ ನಾಗರೀಕರು ಸತ್ಕರಿಸಿದರು.

ಸೇವೆಯಿಂದ ನಿವೃತ್ತರಾದ ಶಿಕ್ಷಕರು ಮತ್ತು ಸಾಧಕ ವಿದ್ಯಾರ್ಥಿಗಳನ್ನು ಇದೇ ಸಂದರ್ಭದಲ್ಲಿ ಸತ್ಕರಿಸಲಾಯಿತು. ವಿವಿಧ ಪ್ರತಿಷ್ಠಾನಗಳಿಂದ ಆದರ್ಶ ಶಿಕ್ಷಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಮೂಡಲಗಿ ಬಿಇಓ ಆಗಿ ಸೇವೆ ಸಲ್ಲಿಸಿ ಈಗ ಬಾಗಲಕೋಟೆ ಡಿಡಿಪಿಐ ಆಗಿ ಸೇವೆಗೆ ಪದೋನ್ನತಿ ಪಡೆದಿರುವ ಅಜೀತ ಮನ್ನಿಕೇರಿ ಅವರಿಗೆ ಶಾಸಕರು 2000 ಗ್ರಾಂ. (2 ಕಿಲೋ ) ತೂಕದ ಬೆಳ್ಳಿಯ ಆಕರ್ಷಕ ಗಣೇಶನ ವಿಗ್ರಹವನ್ನು ನೀಡಿ ಸನ್ಮಾನಿಸಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಸುಣಧೋಳಿಯ ಶಿವಾನಂದ ಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಯುವ ಮುಖಂಡ ಸರ್ವೋತ್ತಮ ಜಾರಕಿಹೊಳಿ, ಮೂಡಲಗಿ ತಹಶೀಲ್ದಾರ ಶ್ರೀಶೈಲ ಗುಡಮೆ, ಗೋಕಾಕ ತಹಶೀಲ್ದಾರ ಡಾ. ಮೋಹನ ಭಸ್ಮೆ, ಚಿಕ್ಕೋಡಿ ಡಿಡಿಪಿಐ ಸೀತಾರಾಮ ಆರ್.ಎಸ್, ಮೂಡಲಗಿ ತಾ.ಪಂ.ಇಓ ಎಫ್.ಜಿ.ಚಿನ್ನನ್ನವರ, ಆರ್.ಎಂ.ಮಠದ,ಮೂಡಲಗಿಕ್ಷೇತ್ರಶಿಕ್ಷಣಾಧಿಕಾರಿ ರೇಣುಕಾಆನಿ,ಗೋಕಾಕಕ್ಷೇತ್ರಶಿಕ್ಷಣಾಧಿಕಾರಿ ಜಿ.ಬಿ.ಬಳಗಾರ,ಎ.ಬಿ.ಮಲಬನ್ನವರ, ಸಿಡಿಪಿಓ ಯಲ್ಲಪ್ಪಗದಾಡಿ,ಅರಭಾವಿ ಕ್ಷೇತ್ರದ ಗಣ್ಯರು, ಮುಖಂಡರು, ವಿವಿಧ ಹಂತದ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ತಿಗಡಿ ಗ್ರಾಮದ ಸಮಸ್ತ ಹಿರಿಯರು,ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಶಿಕ್ಷಕರ ಸಂಘದ ವಿವಿಧ ಘಟಕಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಬಿಇಓ ಆಗಿದ್ದ ಅಜೀತ ಮನ್ನಿಕೇರಿ ಅವರು ಮೂಡಲಗಿ ವಲಯವನ್ನು ಎತ್ತರಕ್ಕೆ ಬೆಳೆಸುವಲ್ಲಿ ಮಹತ್ಕಾರ್ಯ ಮಾಡಿದರು. ಒಂದೆಡೆ ಮನ್ನಿಕೇರಿ ಅವರು ಪದೋನ್ನತಿ ಹೊಂದಿ ಹೋಗುತ್ತಿರುವುದು ಸಂತೋಷಕ್ಕೆ ಕಾರಣವಾದರೆ, ಇನ್ನೊಂದೆಡೆ ಮೂಡಲಗಿ ವಲಯ ಬಿಟ್ಟು ನಿರ್ಗಮಿಸುತ್ತಿರುವುದು ನೋವಿನ ಸಂಗತಿಯಾಗಿದೆ. ಮನ್ನಿಕೇರಿ ಅವರ ಮಾರ್ಗದರ್ಶನದಲ್ಲಿ ನಿಯೋಜಿತ ನೂತನ ಬಿಇಓ ಪಿ.ಬಿ. ಹಿರೇಮಠ ಅವರು ಕಾರ್ಯ ನಿರ್ವಹಿಸಲಿ. ವಲಯದ ಕೀರ್ತಿಯೂ ಇನ್ನೂ ಹೆಚ್ಚಿಸಲಿ.**

**। ಬಾಲಚಂದ್ರ ಜಾರಕಿಹೊಳಿ,**

**ಶಾಸಕರು ಮತ್ತು ಬೆಮುಲ್ ಅಧ್ಯಕ್ಷರು.**

## ಆಸಂಗಿಯಲ್ಲಿ ಮಂಗನ ಕಾಟ: ಹೈರಾಣಾದ ಜನತೆ

**ಬನಹಟ್ಟಿ :** ಸಮೀಪದ ಆಸಂಗಿ ಗ್ರಾಮದಲ್ಲಿ ಕಳೆದೆರಡು ದಿನಗಳಿಂದ ಮಂಗವೊಂದು ಸಾರ್ವನಿಕರಿಗೆ ವಿಪರೀತ ಕಾಟ ನೀಡುತ್ತಿದ್ದು, ಅದರ ಕಡಿತದಿಂದ ಹಲವಾರು ಜನ ಗಾಯಗೊಂಡಿದ್ದಾರೆ. ಮಂಗನ ಸೆರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಹರಸಾಹಸಪಟ್ಟರೂ ಫಲಕಾರಿಯಾಗಿಲ್ಲ.



ಮಂಗನ ಕಾಟದಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗುತ್ತಿದ್ದು, ಕೂಡಲೇ ಅದನ್ನು ಸೆರೆ ಹಿಡಿಯಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಆಸಂಗಿ ಗ್ರಾಮದ ಗಾಣಿಗೇರ ಓಣಿ, ಜ್ಯೋತಿಬಾ ದೇವಸ್ಥಾನ ರಸ್ತೆ ಸೇರಿದಂತೆ ಹಲವೆಡೆಯಲ್ಲಿ ಚಿಕ್ಕ ಮಕ್ಕಳು, ಮಹಿಳೆಯರು, ವೃದ್ಧರಿಗೆ ಸೇರಿ 12 ಜನರಿಗೆ ಮಂಗ ಕಚ್ಚಿದೆಯೆಂದು ಸ್ಥಳೀಯರು ತಿಳಿಸಿದ್ದಾರೆ.

ಮನೆಯಲ್ಲಿಕುಳಿತಜನಗ್ರಾಮದಹೆಲ್ಪಪ್ರದೇಶಗಳಲ್ಲಿ ಮಂಗನ ಕಾಟಕ್ಕೆ ಭಯಭೀತಗೊಂಡ ಜನರು ಮನೆ ಬಾಗಿಲು ಮುಚ್ಚಿಕೊಂಡು ಮನೆಯೊಳಗೇ ಅಡಗಿ ಕುಳಿತುಕೊಳ್ಳುವ ಪ್ರಸಂಗ ನಡೆದಿದ್ದರೆ, ಮಕ್ಕಳು, ಮಹಿಳೆಯರು ರಸ್ತೆಯ ಓಡಾಡುವದೇ ದುಸ್ಥರವಾಗಿದೆ.

ಗುರುವಾರ ಮಧ್ಯಾಹ್ನ ಹೊತ್ತು ಮಂಗ ಹಿಡಿಯಲು ಬೋನು ಇಟ್ಟರೂ ಕೂಡ ಅದು ಬೋನಿಗೆ ಬೀಳದೇ ಅಲ್ಲಲ್ಲಿ ಸೇರುತ್ತಿದ್ದ ಜನರ ಮೇಲೆ ಕಚ್ಚುತ್ತಾ ಎರಗಿದೆ. ಅರಣ್ಯ ಸಿಬ್ಬಂದಿಗಳು ಸ್ಥಳದಲ್ಲಿದ್ದರೂ ಏನೂ ಮಾಡಲು ಸಾಧ್ಯವಾಗದ ಕಾರಣ ಜಮಖಂಡಿಯಿಂದ ಮಂಗನ ಸೆರೆ ಹಿಡಿಯುವವರನ್ನು ಕರೆಸಲಾಗಿದ್ದು, ಎಲ್ಲ ವ್ಯವಸ್ಥೆ ಮಾಡಲಾಗಿದೆ ಎಂದು ಬನಹಟ್ಟಿಯ ಗಸ್ತು ಅಧಿಕಾರಿ ಮಹಾವೀರ ಆಲಗೂರ ತಿಳಿಸಿದ್ದಾರೆ.

## ಚಿಗುರು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ

**ನರಸಾಪುರ :** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ನರಸಾಪುರ ಗ್ರಾಮ ಪಂಚಾಯಿತಿ ಹಾಗೂ ಕರ್ನಾಟಕ ಪಬ್ಲಿಕ್ ಸ್ಕೂಲ್, ನರಸಾಪುರ ಇವರ ಸಾರಥ್ಯದಲ್ಲಿ ನಡೆದ "ಚಿಗುರು" ಸಾಂಸ್ಕೃತಿಕ ಕಾರ್ಯಕ್ರಮ–2025 ಇದರ ಉದ್ಘಾಟನೆಯನ್ನು ಹದಿನೈದು ವಿಶ್ವದಾಖಲೆಗಳ ಸರದಾರ, ಅಂತರರಾಷ್ಟ್ರೀಯ ಭರತನಾಟ್ಯ ಕಲಾವಿದ, ಹಾಗೂ ಹೊಯ್ಸಳ ಪ್ರಶಸ್ತಿ ಪುರಸ್ಕೃತ ಬಾಲಕ ಗ್ರ್ಯಾಂಡ್ ಮಾಸ್ಟರ್ ತಾನೀಶ್.ಎನ್ ರವರು ದೀಪವನ್ನು ಬೆಳಕಿಸುವ ಮೂಲಕ ಮಕ್ಕಳ ಚಿಗುರು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.



ಕಾರ್ಯಕ್ರಮದಲ್ಲಿ ತಾನೀಶ್.ಎನ್ ರವರು ಆಧ್ಯಾತ್ಮಿಕತೆಯನ್ನು ಪ್ರತಿಬಿಂಬಿಸುವ ಶಿವ ಪರಮಾತ್ಮನ ದೈವಿಕ ಗೀತೆಗೆ ಭರತನಾಟ್ಯ ಮಾಡುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮದ ಚಿಗುರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿದ್ದ ಸಾವಿರಾರು ಮಕ್ಕಳ ಪ್ರೀತಿಗೆ ಪಾತ್ರನಾದನು.

ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಎನ್ ವಿಜಯಲಕ್ಷ್ಮಿ

ಶ್ವೇತಾಂಜಲಿ ಭರತನಾಟ್ಯ ಶಾಲೆ ಹಾಗೂ ವಿಶ್ವಮಾನವ ಕುವೆಂಪು ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರು ತಾನೀಶ್.ಎನ್ರವರತಾಯಿಶ್ರೀಮತಿಶ್ವೇತನಾಗರಾಜ್ , ತಂದೆ ಅರಳು ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಯುವಕವಿ ಲಕ್ಕೂರು ಎಂ.ನಾಗರಾಜ್ ಹಾಜರಿದ್ದರು.

## ನಕಲಿ ವೈದ್ಯ ಅಸ್ಲಾಂ ಭಾಷಾ ಡಿ.ಎಚ್. ಓ ಕಚೇರಿಯ ಸುತ್ತ ಓಡಾಟ, ಅನುಮಾನಕ್ಕೆ ಇಡಾದ DHO

**ವಿಜಯನಗರ :** ಹೊಸಪೇಟೆ ತಾಲೂಕಿನ ಕಮಲಾಪುರ ಗ್ರಾಮದಲ್ಲಿ ನಕಲಿ ವೈದ್ಯ ಹಾವಳಿ ಈ ಸುದ್ದಿ ಪಬ್ಲಿಕ್ ನೆಕ್ಸ್ಟ ಹಾಗೂ ಹೊನ್ನನುಡಿ ಪತ್ರಿಕೆ ಯಲ್ಲಿ ಪ್ರಕಟವಾಗಿತ್ತು.

ಸ್ಥಳಕ್ಕೆ ಡಾ.ಶಂಕರ್ ನಾಯ್ಕ್ ಭೇಟಿ ನೀಡಿದ್ದರು. ಆದರೆ ಸೋಮವಾರ ಸಂಜೆ ಈ ನಕಲಿ ವೈದ್ಯ ಅಸ್ಲಾಂ ಭಾಷಾ ಡಿ.ಎಚ್.ಓ ಡಾ.ಶಂಕರ್ ನಾಯ್ಕ ಅವರ ಕಚೇರಿಯ ಹತ್ತಿರ ಪ್ರತ್ಯೇಕ, ನಮ್ಮ ಕ್ಯಾಮರಕ್ಕೆ ಸರಿಯಾಗಿದೆ ಇನ್ನೂ ಪತ್ರಕರ್ತರನ್ನು ನೋಡಿದ ಕೂಡಲೇ ಅಸ್ಲಾಂ ಭಾಷ ಅಲ್ಲಿಂದ ಎಸ್ಕೇಪ್ ಆಗಿದ್ದಾನೆ.

ಈ ನಕಲಿ ವೈದ್ಯ ಜಿಲ್ಲಾಧಿಕಾರಿ, ಜಿಲ್ಲಾ ವೈದ್ಯಾಧಿಕಾರಿ, ರಾಜಕೀಯ ವ್ಯಕ್ತಿಗಳ ಮನೆ ಹತ್ತಿರ ಓಡಾಟ ನಡೆಸಿದ್ದಾನೆ.

ಈ ನಕಲಿ ವೈದ್ಯನಿಗೆ ಸ್ಥಳೀಯ ರಾಜಕೀಯ ವ್ಯಕ್ತಿಗಳು ಹಾಗೂ ಜಿಲ್ಲಾ ಅಧಿಕಾರಿಗಳು ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಆರೋಪ,ಆಕ್ರೋಶ ವ್ಯಕ್ತವಾಗಿದೆ.




## ಲಿಂಗಾನಂದ ಗವಿಮಠರಿಗೆ ರಾಜ್ಯಮಟ್ಟದ ಉತ್ತಮ ಉಪನ್ಯಾಸಕ ಪ್ರಶಸ್ತಿ



**ಬೆಂಗಳೂರು :** ಜಮಖಂಡಿಂ-ಯ ಬಾಲಕರ ಸರಕಾರಿ ಪ.ಭಾ. ಪದವಿ ಪೂರ್ವ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕರಾದ ಡಾ. ಲಿಂಗಾನಂದ ಕೆ. ಗವಿಮಠ ಅವರಿಗೆ 2025-26 ನೇ ಸಾಲಿನ ರಾಜ್ಯಮಟ್ಟದ ಉತ್ತಮ ಉಪನ್ಯಾಸಕ ಪ್ರಶಸ್ತಿ ಲಭಿಸಿದೆ. ಸೆಪ್ಟೆಂಬರ್ ಐದರಂದು ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.
ಕಾಲೇಜಿನಪ್ರಾಚಾರ್ಯರುಹಾಗೂ ಸಿಬ್ಬಂದಿ ವರ್ಗ, ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದವರು ಉಪನ್ಯಾಸಕರನ್ನು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

## ಜೋಳದ ಚೀಲ ಹೊತ್ತು ದೀರ್ಘದಂಡ ನಮಸ್ಕಾರ



**ಚಿಮ್ಮಡ:** ಇಲ್ಲಿಯ ಪ್ರಭುಲಿಂಗೇಶ್ವರ ಕಿಚಡಿ ಜಾತ್ರೆಯಲ್ಲಿ ಗ್ರಾಮದ ಯುವಕ ಪ್ರಭು ಕರಿಗಾರ ಸುಮಾರು 120 ಕಿಲೋ ಭಾರದ ಜೋಳದ ಚೀಲ ಹೆಗಲ ಮೇಲೆ ಹೊತ್ತು ಮನೆಯಿಂದ ಗುಡ್ಡದ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದವರೆಗೆದೀರ್ಘದಂಡ ನಮಸ್ಕಾರ ಹಾಕುವ ಮೂಲಕ ತಮ್ಮ ಹರಕೆ ತೀರಿಸಿದರು.

# ಜಗದಾಳ, ನಾವಲಗಿ ಗ್ರಾಮಗಳಿಂದ ಹೆಚ್ಚುವರಿ ಬಸ್ ಓಡಿಸಲು ಮನವಿ



**ರಬಕವಿ-ಬನಹಟ್ಟಿ:** ತಾಲ್ಲೂಕಿನಜಗದಾಳಮತ್ತು ನಾವಲಗಿ ಗ್ರಾಮದ ನೂರಾರು ವಿದ್ಯಾರ್ಥಿಗಳು ಸಮಯಕ್ಕೆಸರಿಯಾಗಿ ಬಸ್ಸುಗಳು ಸಂಚರಿಸದೇ ಇರುವುದರಿಂದ ಸಮಯಕ್ಕೆ ಸರಿಯಾಗಿ ಶಾಲಾ ಕಾಲೇಜುಗಳಿಗೆ ತಲುಪಲಾರದೆ ಪರದಾಡುವ ಪರಿಸ್ಥಿತಿ ಉಂಟಾಗಿದೆ. ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಇತ್ತ ಗಮನ ಹರಿಸಿ ಗ್ರಾಮದಿಂದ ಬನಹಟ್ಟಿಗೆ ಬೆಳಿಗ್ಗೆ 7-30 ಗಂಟೆಗೆ ಹೆಚ್ಚುವರಿ ಬಸ್ ಓಡಿಸಬೇಕು ಎಂದು ನಾವಲಗಿ ಗ್ರಾಮದ ಮುಖಂಡ ಮಲ್ಲಪ್ಪ ಗಣಿ ಮತ್ತು ವಿದ್ಯಾರ್ಥಿಗಳು ಬನಹಟ್ಟಿ ಬಸ್ ನಿಲ್ದಾಣದ ನಿಯಂತ್ರಣಾಧಿಕಾ-ರಿಗೆ ಮನವಿ ಸಲ್ಲಿಸಿದರು.
ಬೆಳಿಗ್ಗೆ 7-30 ಕ್ಕೆ ಒಂದು ಬಸ್ ಬರುತ್ತಿದ್ದು, ಇದು ನಾವಲಗಿ ಗ್ರಾಮದಿಂದ ಪೂರ್ತಿಯಾಗಿ ಭರ್ತಿಯಾಗಿ ಬರುತ್ತದೆ. ಈ ಬಸ್ ಜಗದಾಳ ಗ್ರಾಮದಲ್ಲಿ ನಿಲ್ಲುವುದೇ ಇಲ್ಲ.
ಅದೇ ರೀತಿಯಾಗಿ ಬೆಳಗಿನ ಎಂಟು ಗಂಟೆಗೆ ಬರಬೇಕಾದ ಬಸ್ ಕೂಡಾ ಸರಿಯಾದ ಸಮಯಕ್ಕೆ ಬರುತ್ತಿಲ್ಲ. ಇದರಿಂದಾಗಿ ಜಗದಾಳ ಹಾಗೂ ಸುತ್ತ ಮುತ್ತಲಿನ ತೋಟ ಮನೆಗಳಲ್ಲಿ ವಾಸಿಸುವ ನೂರಾರು ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಶಾಲಾ ಕಾಲೇಜುಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಬಹಳಷ್ಟು ವಿದ್ಯಾರ್ಥಿಗಳು ಟಂಟಂ ರಿಕ್ಷಾಗಳಿಗೆ ಹೆಚ್ಚಿನ ಹಣ ನೀಡಿ ಬರುತ್ತಾರೆ.
ಆದ್ದರಿಂದ ಬೆಳಿಗ್ಗೆ ಏಳು ಗಂಟೆಗೆ ಮುಧೋಳ ಇಲ್ಲವೆ ಜಮಖಂಡಿ ಡಿಪೋದಿಂದ ಹೆಚ್ಚುವರಿ ಬಸ್ ಓಡಿಸಿದರೆ ಇಲ್ಲಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ಎಂದು ಗ್ರಾಮದ ವಿದ್ಯಾರ್ಥಿಗಳಾದ ಎನ್. ಬಿ. ಬಿರಾದಾರ ಪಾಟೀಲ, ಎಂ. ಬಿ. ಹೊಸೂರ, ಎಚ್. ಎಚ್. ಅಸ್ಕಿ,ಜೆ.ಡಿ.ಕಾಡದೇವರ,ಎಸ್.ಬಿ.ಹೊಸೂರ, ಎಸ್. ಎಸ್. ಉಳ್ಳಾಗಡ್ಡಿ, ಆರ್. ಆರ್. ಮೇಟಿ, ಡಿ. ಎಂ. ದಡ್ಡಿಮನಿ, ಡಿ. ಎಂ. ಹೊಸೂರ ಸೇರಿದಂತೆ ಇನ್ನೂ ಅನೇಕ ವಿದ್ಯಾರ್ಥಿಗಳು ತಿಳಿಸಿದ್ದಾರೆ.

### ಹ್ಯಾಂಡ್ಲೂಮ್, ಪವರ್‌ಲೂಮ್ ಬಡಕೂಲಿಕಾರ ನೇಕಾರ ಸಂಘ, ನೂತನ ಕಟ್ಟಡದ ಉದ್ಘಾಟನೆ

## ಪಾರಂಪರಿಕೆ ನೇಕಾರಿಕೆ ಉಳಿಸಿ ಬೆಳೆಸಿ: ಗುರುಸಿದ್ಧ ಶ್ರೀಗಳು



**ಗುಳೇದಗುಡ್ಡ :** ಹೆಗಲಿಗೆ ಹೆಗಲು ಕೊಟ್ಟು ದುಡಿದಾಗ ನೇಕಾರಿಕೆ ಉದ್ಯೋಗಕ್ಕೆ ಬಲ ಸಿಗುತ್ತದೆ. ಪ್ರತಿಯೊಬ್ಬ ನೇಕಾರರು ತಮ್ಮ ಉದ್ಯೋಗದ ಕಡೆಗೆ ಹೆಚ್ಚಿನ ಆದ್ಯತೆ ಕೊಟ್ಟು ಪಾರಂಪರಿಕ ನೇಕಾರಿಕೆ ಕಲೆಯನ್ನು ಉಳಿಸಿ ಬೆಳೆಸಬೇಕು ಎಂದು ಶ್ರೀಜಗದ್ಗುರು ಗುರುಸಿದ್ಧ ಪಟ್ಟದಾರ್ಯ ಮಹಾಸ್ವಾಮಿಗಳು ಹೇಳಿದರು.
ಪಟ್ಟಣದ ಬಾಗಲಕೋಟೆ ರಸ್ತೆಗೆ ಹೊಂದಿಕೊಂಡಿರುವ ನೇಕಾರ ನಗರದಲ್ಲಿ ಹ್ಯಾಂಡ್ಲೂಮ್ ಮತ್ತು ಪವರ್ ಬಡಕುಲಿಕಾರ ನೇಕಾರ ಸಂಘದ ನೂತನ ಕಟ್ಟಡದ ಉದ್ಘಾಟನೆ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿ, ಬಹಳಷ್ಟು ಶ್ರಮವಹಿಸಿ ಹಿರಿಯರು ಜಾಗ ಖರೀದಿಸಿ ಕಟ್ಟಡ ನಿರ್ಮಿಸಿದ್ದಾರೆ.
ಯುವಕರು ಮುಂದಿನ ದಿನಗಳಲ್ಲಿ ಈ ಈ ಸಂಘವನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸಿ ಹ್ಯಾಂಡ್ಲೂಮ್ ಮತ್ತು ಪವರ್ಲೂಮ್ ಬಡಕುಲಿಕಾರರಿಗೆ ಆಸರೆಯಾಗಿ ಗೆಲ್ಲಬೇಕು. ನೇಕಾರರು ಆರ್ಥಿಕವಾಗಿ ರಾಜಕೀಯವಾಗಿ ಬಲಿಷ್ಠರಾಗಬೇಕು ಎಂದರು.
ಬಾಗಲಕೋಟೆಜಿಲ್ಲಾನೇಕಾರಸಮುದಾಯಗಳ ಒಕ್ಕೂಟದ ಅಧ್ಯಕ್ಷ ಚಂದ್ರಕಾಂತ ಶೇಖಾ ಮಾತನಾಡಿ, ಈ ಬಡಕುಲಿಕಾರ ನೇಕಾರ ಸಂಘ ಹುಟ್ಟು ಹಾಕುವಲ್ಲಿ ಹಿರಿಯರ ಶ್ರಮ ಅಪಾರವಾಗಿದೆ. ಸಂಘದ ಬೆಳವಣಿಗೆಗೆ ನಾವೆಲ್ಲ ಇನ್ನಷ್ಟು ಶ್ರಮವಹಿಸಿ ಕೆಲಸ ಮಾಡಬೇಕು ಎಂದರು.
ಲಕ್ಷ್ಮೀ ಸಹಕಾರಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಸಂಪತ್ತಕುಮಾರ ರಾಠಿ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಸಂಘದಅಧ್ಯಕ್ಷಮೈನೂದ್ದೀನ ಜಮಖಾನಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಕಾರ್ಯಕ್ರಮದಲ್ಲಿ ಸಂಘದ ಗೌರವಾಧ್ಯಕ್ಷ ಅಶೋಕ ಹೆಗಡೆ, ಉಪಾಧ್ಯಕ್ಷ ಸಂಗಪ್ಪ ಅಲದಿ, ಕಾರ್ಯದರ್ಶಿ ಸಂತೋಷ ನೇಮತಿ, ಸಹ ಕಾರ್ಯದರ್ಶಿ ದೊಡ್ಡಬಸುಉಂಕಿ, ಬಸವರಾಜ ಚಾರಕಾನಿ, ಗುರಪ್ಪ ಹುಣಶ್ಯಾಳ, ಈರಪ್ಪ ಮಲಗಾ, ಮಲ್ಲಿಕಾರ್ಜುನ ಅಣಿ, ಬಾಲಕೃಷ್ಣ ನಿರಂಜನ, ಈರಣ್ಣ ಚಲ್ಲಾ, ಶ್ರೀಕಾಂತ ಮನ್ನೂರ, ಆದಪ್ಪ ತಾಂಡೂರ, ಸಂಗಪ್ಪ ರಂಜನಿಗಿ, ಮಹೇಶ ಸೂಡಿ, ಶಿವಾನಂದ ಇಟಗಿ, ಪಾಂಡುಸಾರ ಪವಾರ, ವೀರಭದ್ರಪ್ಪ ಘಂಟಿ ಇತರರು ಇದ್ದರು.

## ಚಲವಾದಿ ಹಿರಿಯ ನಾಗರಿಕರ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಬಾಗಲಕೋಟೆ :** ಬಾಗಲಕೋಟ ಜಿಲ್ಲಾ ಚಲವಾದಿ ಸಮಾಜದ ಹಿರಿಯ ನಾಗರಿಕರ ಸಂಘದಿಂದ ಸೆಪ್ಟಂಬರ್-2025ರ ಕೊನೆಯ ವಾರದಲ್ಲಿ ಜರುಗುವ ಛಲವಾದಿ ಸಮಾಜದ ಕಾರ್ಯಕ್ರಮದಲ್ಲಿ 2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ & ಪಿಯುಸಿ ಪರೀಕ್ಷೆಯಲ್ಲಿ ಪ್ರತಿಶತ 80% ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗುವವರು ವಿದ್ಯಾರ್ಥಿಗಳ ಅಂಕಪಟ್ಟಿ, ಆಧಾರ್ ಕಾರ್ಡ್, ಫೋನ್ ನಂಬರ್, ತಾಲೂಕು - ಊರು ವಿಳಾಸದೊಂದಿಗೆ ದಿನಾಂಕ: 15-09-2025 ರೊಳಗಾಗಿ ಸಂಘದ ನಿರ್ದೇಶಕರುಗಳಾದ ರಾಮಚಂದ್ರ ನಾಟಿಕಾರ ಮೊ.8123136921 ಹಾಗೂ ವೈ.ಎನ್.ಚಲವಾದಿ ಮೊ.9449644862 ಇವರಿಗೆ ವಾಟ್ಸಪ್ ಮುಖಾಂತರ ಕಳಿಸಲು ಚಲವಾದಿ ಸಮಾಜದ ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಅಶೋಕ ನಾರಾಯಣಿ, ಕಾರ್ಯದರ್ಶಿ ಎಚ್.ಡಿ.ಹೊಸಮನಿ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾಲ್ಲೂಕಾ ಮಟ್ಟದ ದಸರಾ ಕ್ರೀಡಾಕೂಟ ಆಯೋಜನೆ


**ಬಾಗಲಕೋಟೆ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ 2025-26ನೇ ಸಾಲಿನ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ. ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬಾಗಲಕೋಟೆ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ಸೆಪ್ಟೆಂಬರ್ 06ರಂದು ನಡೆಯಲಿವೆ.
ಭಾಗವಹಿಸಲು ಇಚ್ಛಿಸುವವರು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಆರ್.ಆರ್. ಪಾಟೀಲ್ (9606743226) ಮತ್ತು ಅನಿತಾ ಎಂ ನಿಂಬರಗಿ (9449959064) ಸಂಪರ್ಕಿಸಬಹುದು. ಅಥ್ಲೆಟಿಕ್ಸ್ , ವಾಲಿಬಾಲ್, ಫುಟ್ಬಾಲ್, ಖೋ- ಖೋ, ಕಬಡ್ಡಿ, ಥ್ರೋಬಾಲ್ ಮತ್ತು ಯೋಗಾಸನ ಆಯೋಜಿಸಲಾಗಿದ್ದು, ಸ್ಪರ್ಧಾಳುಗಳು ಸೂಕ್ತ ದಾಖಲೆಗಳೊಂದಿಗೆ https://dasaracmcup-2025.etrpindia.com/KA-sports/ ಲಿಂಕ್ ಬಳಸಿ ಆನ್ಲೈನ್ ನೊಂದಣಿ ಮಾಡಿಕೊಳ್ಳಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಪರಿಚಿತ ಶವ ಪತ್ತೆ

**ಬಾಗಲಕೋಟೆ :** ವಿಜಯಪುರ-ಅಲಿಯಾಬಾದ ರೈಲ್ವೆ ನಿಲ್ದಾಣಗಳ ಮಧ್ಯೆ (ಕಿ.ಮಿ. 191/600-192/000) ಸುಮಾರು 30 ವರ್ಷದ ಅಪರಿಚಿತ ಗಂಡಸರ ಶವ ಪತ್ತೆಯಾಗಿದೆ. ಈ ಕುರಿತು ರೈಲ್ವೆ ಪೊಲೀಸ್ ಠಾಣೆ ವಿಜಯಪುರದಲ್ಲಿ ಯುಡಿಆರ್ ನಂ.28/2025, ಕಲಂ 194 ಬಿ ಎನ್-ಎಸ್‌ಎಸ್ ಅಕ್ಸ-2023ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ಎತ್ತರ 5.5 ಅಡಿ, ದುಂಡುಮುಖ, ದಪ್ಪ ಮೂಗು, ಗೋಧಿ ಮೈಬಣ್ಣ, ಗಡ್ಡ-ಚಿಗುರು ಮಿಸೆ ಇರುತ್ತದೆ. ತಲೆಯಲ್ಲಿ 2 ಇಂಚು ಕಪ್ಪು ಕೂದಲು.ಬೂದು ಬಣ್ಣದ ಜೀನ್ಸ್, ಕಪ್ಪು ಬಣ್ಣದ ಟೀ ಶರ್ಟ್, ಕೆಂಪು ಮತ್ತು ಹಸಿರು ಬಣ್ಣದ ಊಡದಾರ ಧರಿಸಿದ್ದಾನೆ, ಬಲಗೈಯಲ್ಲಿ ಕಬ್ಬಿಣ ಬಣ್ಣದ ಉಂಗುರು ಹಾಗೂ ಒಂದು ಪ್ಲಾಸ್ಟಿಕ್ ರಾಕಿ ಇರುತ್ತದೆ. ಗುರುತಿನ ಚೀಟಿ ಅಥವಾ ನಗದು ಸಿಕ್ಕಿಲ್ಲ. ಮೃತನ ಹೆಸರು-ವಿಳಾಸ ಪತ್ತೆ ಹಚ್ಚಿದವರು ರೈಲ್ವೆ ಪೊಲೀಸ್ ಠಾಣೆ ವಿಜಯಪುರ (ದೂರವಾಣಿ: 08352-250883, e-mail: bijapurrly@ksp.gov.in) ಅಥವಾ ರೈಲ್ವೆ ಕಂಟ್ರೋಲ್ ರೂಂ (080-22871291, dcrly@ksp.gov.in) ಸಂಪರ್ಕಿಸಲು ಕೋರಲಾಗಿದೆ.

# ಕುಟುಂಬ ಸಂರಕ್ಷಣೆ: ಪ್ರವಾದಿ ಮಾದರಿ

ಕುಟುಂಬವು ಗಂಡು-ಹೆಣ್ಣು ಸತಿ-ಪತಿಗಳಾಗಿ ಮದುವೆ ಎನ್ನುವ ಬಂಧದಿಂದ ಪ್ರಾರಂಭವಾಗುತ್ತದೆ. ವಿವಾಹವು ಪವಿತ್ರವಾಗಿದೆ ಮತ್ತು ಇಸ್ಲಾಂ ಧರ್ಮವು ವಿವಾಹವನ್ನು ಬಲವಾಗಿ ಪ್ರತಿಪಾದಿಸುತ್ತದೆ. ಗಂಡ, ಹೆಂಡತಿ ಕುಟುಂಬ ವ್ಯವಸ್ಥೆಯ ಬುನಾದಿಗಳು. ಆದಿಮಾತಾಪಿತ ಆದಮ್, ಹವ್ವರಿಂದ ಪ್ರಾರಂಭವಾದ ಇಸ್ಲಾಮಿ ಕುಟುಂಬ ವ್ಯವಸ್ಥೆಯು ಇಂದಿಗೂ ಮುಂದುವರಿದಿದೆ. ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಕುಟುಂಬ ವ್ಯವಸ್ಥೆಯು ಕೆಲವೊಂದು ಬದ್ಧತೆಗಳನ್ನು ಪೂರೈಸಬೇಕೆಂದು ಇಸ್ಲಾಂ ಬಯಸುತ್ತದೆ.
ಕುಟುಂಬವೆಂದರೆ ಕೇವಲ ಮಾನವ ಜಾತಿಯ ಸಂತಾನವೃದ್ಧಿಗೆ ಪೂರಕವಾದ ವ್ಯವಸ್ಥೆಯಲ್ಲ. ಆದರೂ ಜನಾಂಗದ ಸಂರಕ್ಷಣೆ ಮತ್ತು ಮುಂದುವರಿಯುವಿಕೆ ಅದರ ಉದ್ದೇಶಗಳಲ್ಲಿ ಒಂದಾಗಿದೆ. ಹಾಗೆ ತಕ್ವ, ನೈತಿಕತೆಯ ಸಂರಕ್ಷಣೆ, ಸಾಮರಸ್ಯ, ನೆಮ್ಮದಿ, ಮಾನಸಿಕ ಮತ್ತು ಭಾವನಾತ್ಮಕ ಸ್ಥಿರತೆ, ಪ್ರೀತಿ ಮತ್ತು ದಯೆ, ಸಾಮಾಜಿಕ ಮತ್ತು ಆರ್ಥಿಕ ಭದ್ರತೆ? ಇವು ಕುಟುಂಬ ವ್ಯವಸ್ಥೆಯ ಕೆಲವೊಂದು ಉದ್ದೇಶಗಳು..
ಪವಿತ್ರ ಕುರ್‌ಆನ್‌ನ ಅನ್ನಿಸಾ ಅಧ್ಯಾಯದ 34ನೇ ಸೂಕ್ತದಲ್ಲಿ ಹೇಳಲಾಗಿದೆ, "ಅರ್-ರಿಜಾಲು ಕವ್ವಾಮೂನಾ ಅಲನ್ ನಿಸಾ"- "ಪುರುಷರುಮಹಿಳೆಯರಮೇಲ್ವಿಚಾರಕರು.." ವಾಸ್ತವದಲ್ಲಿ ಕವ್ವಾಮ್ ಎಂದರೆ ತನ್ನ ಕುಟುಂಬದಲ್ಲಿ ತನ್ನ ಅಧೀನಕ್ಕೊಳಪಟ್ಟ ಮಹಿಳೆಯರನ್ನು ರಕ್ಷಿಸುವವನು ಮತ್ತು ಮೇಲ್ವಿಚಾರಣೆ ನಡೆಸುವವನು. ಕವ್ವಾಮ್ ಎಂದರೆ ಮಹಿಳೆಯ ಮೇಲಿನ ಪುರುಷನ ಆಧಿಪತ್ಯದ ಹೆಸರಲ್ಲ. ಬದಲಾಗಿ ಆಕೆಯ ವಲಿ ಅಥವಾ ರಕ್ಷಕನಾಗಿದ್ದಾನೆ. ಇಹಲೋಕದಲ್ಲೂ ಪರಲೋಕದಲ್ಲೂ ತನ್ನ ಕುಟುಂಬದ ಒಳಿತನ್ನು ಖಚಿತಪಡಿಸುವುದಾಗಿದೆ ವಲಿಯ ಗುರಿ. ಕುಟುಂಬ ವ್ಯವಸ್ಥೆಯಲ್ಲಿ ತಂದೆ, ಗಂಡ, ಮಗ, ತಂದೆಯ ಸಹೋದರರು, ಅಜ್ಜಂದಿರು ಹೆಣ್ಣಿನ ಪಾಲಿನ ಕವ್ವಾಮ್‌ನ ಸ್ಥಾನವನ್ನು ತುಂಬುತ್ತಾರೆ. ಇಸ್ಲಾಮಿ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಹೆಚ್ಚಿನ ಹೊರೆಗಳಿಂದ ಮುಕ್ತಳು ಅದರಲ್ಲೂ ಆರ್ಥಿಕ ಹೊರೆಯಿಂದಂತೂ ಸಂಪೂರ್ಣ ಮುಕ್ತಳು.
ಆಕೆಯ ಲಾಲನೆ ಪಾಲನೆ, ವಿವಾಹ, ವಿದ್ಯಾಭ್ಯಾಸ, ಜೀವನಾಧಾರಗಳೆಲ್ಲವೂ ಕವ್ವಾಮ್‌ನ ಜವಾಬ್ದಾರಿಯಾಗಿದೆ. ಹಾಗಾಗಿ



ಇಸ್ಲಾಮೀ ಕುಟುಂಬ ವ್ಯವಸ್ಥೆಯು ಕುಟುಂಬದ ನಿರ್ವಹಣೆಯ ಸಂಪೂರ್ಣ ಜವಾಬ್ದಾ-ರಿಯನ್ನು ಪುರುಷನಿಗೆ ವಹಿಸಿದೆ. ಇದು ನೈತಿಕ ಹೊಣೆಗಾರಿಕೆ ಮಾತ್ರವಲ್ಲ ಕಾನೂನು ಬಾಧ್ಯತೆಯೂ ಹೌದು. ಮಹಿಳೆ ತನ್ನ ಪಾಲಿನ ಗಳಿಕೆಯನ್ನು ತನ್ನ ಇಚ್ಛೆಯಿಂದ ಮಾತ್ರ ಕುಟುಂಬ ನಿರ್ವಹಣೆಗೆ ನೀಡಬಹುದೇ ಹೊರತು ಆಕೆಯ ಮೇಲೆ ಯಾವುದೇ ಬದ್ಧತೆಗಳಿಲ್ಲ. ಆದರೆ ಕುಟುಂಬದ ಯೋಗಕ್ಷೇಮ ಮತ್ತು ಮನೆಯ ಆರೈಕೆ ಜವಾಬ್ದಾರಿಯು ಮನೆಯೊಡತಿಯದ್ದಾಗಿದೆ ಮತ್ತು ಆಕೆ ಸಲಹೆ ಅಭಿಪ್ರಾಯಗಳನ್ನು ನೀಡಲು ಸ್ವತಂತ್ರಳು. ಗಂಡನ ಸಂತೋಷ ಮತ್ತು ಅವರ ಮಕ್ಕಳ ದೈಹಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಮುಸ್ಲಿಂ ಮಹಿಳೆಯ ಪಾತ್ರ ಬಹುಮುಖ್ಯವಾಗಿದೆ.
ಪ್ರವಾದಿ(ಸ) ಅವರ ಕುಟುಂಬ ಜೀವನ ಅನುಕರಣಾ ಯೋಗ್ಯವಾಗಿದೆ. ಪ್ರವಾದಿಯವರು(ಸ)ಉತ್ತಮಅನುಕರಣೀಯ ಕೌಟುಂಬಿಕ ವ್ಯಕ್ತಿಯಾಗಿದ್ದರು. ಅವರು ಪರಿಣಾಮಕಾರಿ ಮತ್ತು ಜವಾಬ್ದಾರಿಯುತ ಪ್ರೀತಿಯ ಪತಿ, ತಂದೆ ಮತ್ತು ಅಜ್ಜನಾಗಿದ್ದರು. ಗಂಡ ಮತ್ತು ಹೆಂಡತಿಯ ನಡುವಿನ ಆರೋಗ್ಯಕರ ಸಂಬಂಧವು ಯಶಸ್ವಿ ದಾಂಪತ್ಯ ಮತ್ತು ಆನಂದದಾಯಕ ಕುಟುಂಬಕ್ಕೆ ಕೀಲಿಕೈಯಾಗಿದೆ.
ದಾಂಪತ್ಯದಲ್ಲಿ ನೆಮ್ಮದಿಯ ನೆಲೆಯನ್ನು ಪಡೆಯಲು, ಪತಿ-ಪತ್ನಿಯರ ನಡುವೆ ಪರಸ್ಪರ ಪ್ರೀತಿ ಮತ್ತು ಗೌರವ ಇರಬೇಕು ಎಂದು ಪ್ರಾವಾದಿ(ಸ) ನಮಗೆ ತೋರಿಸಿ ಕೊಟ್ಟಿದ್ದಾರೆ. ಪ್ರವಾದಿಯವರು(ಸ) ತನ್ನ ಮನೆಯವರ ಕಡೆಗೆ ಆದರ, ಅರ್ಥೈಸುವಿಕೆ, ಗೌರವ, ದಯೆ, ಕ್ಷಮೆ ತೋರುವ ವ್ಯಕ್ತಿಯಾಗಿದ್ದರು.
ಅಲ್ಲಾಹನು ಹೇಳುತ್ತಾನೆ, "ಅವರು ನಿಮಗೆ ಉಡುಪಾಗಿರುವವರು ಮತ್ತು ನೀವು ಅವರಿಗೆ ಉಡುಪಾಗಿರುವಿರಿ." (2: 187)
ಪರಸ್ಪರ ಪ್ರೀತಿಯು ವೈವಾಹಿಕ ಜೀವನವನ್ನು ಸುಂದರಗೊಳಿಸುತ್ತದೆ.ಆದರೆಸತಿಪತಿಗಳಿಬ್ಬರು ತಖ್ವಾವನ್ನು ಹೊಂದಿರುವುದು ಪ್ರಮುಖ ಅಂಶವಾಗಿದೆ. ಏಕೆಂದರೆ ಪ್ರೀತಿಯು ಕಾಲಾನಂತರದಲ್ಲಿ ಮಸುಕಾಗಬಹುದು. ಒಂದು ವೇಳೆ ಪ್ರೀತಿಯು ಮಸುಕಾದರೆ, ತಖ್ವಾವು ಗಂಡ ಮತ್ತು ಹೆಂಡತಿಯ ನಡುವಿನ ಪರಸ್ಪರ ಗೌರವದ ಸಂಬಂಧವನ್ನು ಎತ್ತಿ ಹಿಡಿಯುತ್ತದೆ.
ಒಮ್ಮೆ ಮುಸ್ಲಿಂ ಪೀಳಿಗೆಯ ವಿದ್ವಾಂಸರಲ್ಲಿ ಒಬ್ಬರಾದ ಹಸನ್ ಅಲ್-ಬಸ್ರಿ, ತನ್ನ ಮಗಳಿಗೆ ಸಂಗಾತಿಯನ್ನು ಆಯ್ಕೆ ಮಾಡಲು ನೋಡಬೇಕಾದ ಗುಣಲಕ್ಷಣಗಳನ್ನು ವಿಚಾರಿಸುತ್ತಿದ್ದ ತಂದೆಗೆ ಈ ರೀತಿಯಾಗಿ ಸಲಹೆ ನೀಡಿದರು: "ತಖ್ವಾ ಹೊಂದಿರುವ ವ್ಯಕ್ತಿಗೆ ಅವಳನ್ನು ಕೊಡು. ಅವನು ನಿಮ್ಮ ಮಗಳನ್ನು ಪ್ರೀತಿಸಿದರೆ, ಅವನು ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಮತ್ತು ಅವನು ಅವಳನ್ನು ಇಷ್ಟ ಪಡದಿದ್ದರೆ ಅವಳ ಮೇಲೆ ದೌರ್ಜನ್ಯವೆಸಗುವುದಿಲ್ಲ."
ಒಬ್ಬ ವ್ಯಕ್ತಿಯು ತನ್ನ ಕುಟುಂಬವನ್ನು ದಯೆಯಿಂದ ನಡೆಸಿಕೊಳ್ಳದಿದ್ದರೆ ಅವನು ಅಥವಾ ಅವಳು ಸಂಪೂರ್ಣ ವಿಶ್ವಾಸಿಯಾಗಲಾರರು. ನೈಜ ವಿಶ್ವಾಸವು ಪ್ರವಾದಿ ಮುಹಮ್ಮದ್(ಸ)ರ ಬೋಧನೆಗಳಿಗೆ ಬದ್ಧವಾಗಿದೆ.
ಮಹಿಳೆಯು ಹಕ್ಕುಗಳಿಂದ ವಂಚಿತಳಾಗಿದ್ದ, ಮಹಿಳೆಯನ್ನು ಪುರುಷನಿಗಿಂತ ಕೀಳು ಮತ್ತು ಆಕೆಯನ್ನು ಸರಕೆಂದು ಭಾವಿಸುತ್ತಿದ್ದ ಮತ್ತು ಹೆಣ್ಣು ಶಿಶುಗಳನ್ನು ಜೀವಂತ ಹೂಳುವುದು ಸಾಮಾನ್ಯವೆಂಬ ಕಾಲಘಟ್ಟದಲ್ಲಿ ಪ್ರವಾದಿ(ಸ) ಬೆಳೆದಿದ್ದರು.
ಇಸ್ಲಾಂ ಅನ್ನು ಪರಿಚಯಿಸುವಾಗ, ಪ್ರವಾದಿ(ಸ) ಪ್ರತಿಯೊಬ್ಬ ಮಹಿಳೆಯರನ್ನು



ಗೌರವಾದರದಿಂದ ಕಾಣಬೇಕು ಎಂದು ಕರೆ ನೀಡಿದರು. ಪ್ರವಾದಿ(ಸ) ಹೇಳಿದ್ದಾರೆ, "ಯಾರಿಗೆ ಹೆಣ್ಣು ಮಕ್ಕಳ (ಬೆಳೆಸುವ) ಜವಾಬ್ದಾರಿಯನ್ನು ವಹಿಸಲಾಗಿದೆಯೋ ಅವರು ಆ ಮಕ್ಕಳನ್ನು ಉತ್ತಮ ರೀತಿ ಹಾಗೂ ದಯೆಯೊಂದಿಗೆ ನಡೆಸಿಕೊಳ್ಳಲಿ. ಅವರು (ಆ ಹೆಣ್ಣು ಮಕ್ಕಳು) ನರಕದ ಬೆಂಕಿಯ ವಿರುದ್ಧ ಅವರಿಗೆ ರಕ್ಷಣೆಯಾಗುವರು.
ದಯೆಯು ಪ್ರೀತಿಯ ಅತ್ಯಂತ ಸುಂದರ ವಿಧವಾಗಿದೆ. ಪ್ರವಾದಿ ಯವರು(ಸ) ಹೇಳಿದ್ದಾರೆ, "ನಿಮ್ಮಲ್ಲಿ ಉತ್ತಮರು ಅವರ ಕುಟುಂಬಗಳಿಗೆ ಉತ್ತಮರು ಮತ್ತು ನಾನು ನನ್ನ ಕುಟುಂಬಕ್ಕೆ ಉತ್ತಮ."
ಪ್ರವಾದಿ ಮುಹಮ್ಮದ್(ಸ) ತನ್ನ ಪತ್ನಿಯ-ರಿಗೆ ಸಹಾಯಕರಾಗಿ ಮನೆಗೆಲಸವನ್ನು ಮಾಡುತ್ತಿದ್ದರು. ತನ್ನ ಬಟ್ಟೆಗಳನ್ನು ತಾನೇ ತೊಳೆಯುತ್ತಿದ್ದರು. ಅವರ ತಾಳ್ಮೆಯನ್ನು ಪರೀಕ್ಷಿಸಿದಾಗಲೂ, ಅವರು ತಮ್ಮ ಮಾತುಗಳಲ್ಲಿ ಅಥವಾ ಕಾರ್ಯಗಳಲ್ಲಿ ಎಂದಿಗೂ ನಿರ್ದಯಿಯಾಗಲಿಲ್ಲ.
ಸಂಬಂಧದಲ್ಲಿ ಸಂವಹನ ಅತ್ಯಗತ್ಯ. ಮೃದುವಾಗಿ ಮಾತನಾಡುವುದು ಪ್ರವಾದಿ ಮುಹಮ್ಮದ್ ಅವರ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಪ್ರವಾದಿಯವರು(ಸ) ಯಾರೊಂದಿಗೂ ಕಟುವಾದ ಪದಗಳನ್ನು ಬಳಸಲಿಲ್ಲ. ಅವರು ತಮ್ಮ ಪತ್ನಿಯರು ಮತ್ತು ಮಕ್ಕಳನ್ನು ತಿದ್ದುವ ಅಗತ್ಯವಿದ್ದಾಗಲೂ ಅವರ ಬಗ್ಗೆ ಅಪಾರವಾದ ಮೃದುತ್ವವನ್ನು ಹೊಂದಿದ್ದರು. ಪ್ರವಾದಿಯವರು(ಸ) ತಮ್ಮ ಪತ್ನಿಯರನ್ನು ಆದರಿಸಿದ್ದರು ಮತ್ತು ಅವರ ಅಭಿಪ್ರಾಯಗಳನ್ನು ಗೌರವಿಸಿದ್ದರು. ಪ್ರವಾದಿ ಮುಹಮ್ಮದ್(ಸ) ರವರು ತಮ್ಮ ಮಗಳು ಫಾತಿಮಾರನ್ನು ತುಂಬಾ ಪ್ರೀತಿಸುತ್ತಿದ್ದರು. ಅವರು ಬರುವುದನ್ನು ಕಂಡಾಗಲೆಲ್ಲಾ ಪ್ರವಾದಿ(ಸ) ಎದ್ದು ನಿಂತು, ಅವರನ್ನು ಚುಂಬಿಸುತ್ತಿದ್ದರು ಮತ್ತು ಅವ-ರಿಗೆ ಕುಳಿತುಕೊಳ್ಳಲು ತನ್ನ ಸ್ಥಳವನ್ನು ಬಿಟ್ಟು ಕೊಡುತ್ತಿದ್ದರು.
ಪತ್ನಿ ಮತ್ತು ಮಕ್ಕಳೊಂದಿಗಿನ ಪ್ರವಾದಿ(ಸ) ಅವರ ವ್ಯವಹಾರ ಮತ್ತು ಮೃದುತ್ವವು ನಾವು ನಮ್ಮ ಸ್ವಂತ ಕುಟುಂಬದೊಂದಿಗೆ ವ್ಯವಹ-ರಿಸುವಾಗ ಪ್ರಯೋಗಿಸಬೇಕಾಗುತ್ತದೆ. ತಮ್ಮ ಕುಟುಂಬಗಳಲ್ಲಿ ಪ್ರೀತಿ ಮತ್ತು ನೆಮ್ಮದಿಯ ನೆಲೆಯನ್ನು ಸ್ಥಾಪಿಸುವ ಗುರಿಯನ್ನು ಹೊಂದಿರುವ ಯಾವುದೇ ವ್ಯಕ್ತಿಗೆ ಪ್ರವಾದಿ ಮುಹಮ್ಮದ್(ಸ)ರ ಬದುಕು ಉತ್ತಮ ದಾ-ರಿದೀಪವಾಗಿದೆ.

***

**ಕೃಪೆ : ಸನ್ಮಾರ್ಗ**
*** ಆಯಿಫ ಅಬ್ದುಲ್ಲಾಹ್, ರಿಯಾದ್**

# ಪಂಪಾಸರೋವರ: ಮೂಲಸೌಕರ್ಯ ಮರೀಚಿಕೆ

**ಗಂಗಾವತಿ :** ಸೀತೆಯ ಹುಡುಕಾಟದ ಭಾಗವಾಗಿ ರಾಮ–ಲಕ್ಷ್ಮಣ ಕಿಷ್ಕಿಂಧೆಯ ಸುಗ್ರೀವನ ಭೇಟಿಗಾಗಿ ಋಷಿಮುಖ ಪರ್ವತಕ್ಕೆ ತೆರಳುವ ಮಾರ್ಗ ಮಧ್ಯೆ ವಿಶ್ರಾಂತಿಗಾಗಿ ತಂಗಿದ ಪಂಪಾಸರೋವರ ಸ್ಥಳ ಇದೀಗ ಮೂಲಸೌಕರ್ಯ ಕೊರತೆ ಎದುರಿಸುತ್ತಿದ್ದು, ಇಲ್ಲಿಗೆ ಬರುವ ಭಕ್ತರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಪಂಪಾಸರೋವರಕ್ಕೆ ರಾಮಾಯಣ ಮತ್ತು ವಿಜಯನಗರ ಸಾಮ್ರಾಜ್ಯದ ಇತಿಹಾಸವಿದೆ. ರಾಮ–ಲಕ್ಷ್ಮಣಗಾಗಿ ಶಬರಿ ಕಾದ ಸ್ಥಳ ಎಂಬ ಪ್ರತೀತಿಯೂ ಇದೆ. ಬ್ರಹ್ಮನ ಮಾನಸ ಪುತ್ರಿ ಪಂಪಾದೇವಿ ಇದೇ ಸ್ಥಳದಲ್ಲಿ ನಿತ್ಯ ಸ್ನಾನಮಾಡಿ, ತಪಸ್ಸಿನ ಮೂಲಕ ವಿರೂಪಾಕ್ಷನನ್ನು ಮೆಚ್ಚಿಸಿ, ಆತನನ್ನು ವರಿಸಿದ ಇತಿಹಾಸವು ಉಲ್ಲೇಖವಿದೆ.

ಪಂಪಾಸರೋವರ ಅಭಿವೃದ್ಧಿಗೆ ಮುಂದಾಗಬೇಕಾದ ತಾಲ್ಲೂಕು ಆಡಳಿತ, ಪ್ರವಾಸೋದ್ಯಮ ಇಲಾಖೆ, ಜಿಲ್ಲಾಡಳಿತ, ಧಾರ್ಮಿಕ ದತ್ತಿ ಇಲಾಖೆ ಜಾಣ ಕುರುಡು ತೋರುತ್ತಿದೆ. ಈ ತಾಣ ಮೂಲ ಸ್ವರೂಪ ಕಳೆದುಕೊಂಡು, ಈಗ ಬಿಕೋ ಎನ್ನುತ್ತಿದೆ.



ಪಂಪಾಸರೋವರಕ್ಕೆ ರಾಜಸ್ಥಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ, ಬಿಹಾರ, ಆಂಧ್ರಪ್ರದೇಶ, ತೆಲಂಗಾಣ ಸೇರಿ ಕರ್ನಾಟಕ ರಾಜ್ಯದ ವಿವಿಧ ಪ್ರದೇಶಗಳಿಂದ ಭಕ್ತರು, ಪ್ರವಾಸಿಗರು ನಿತ್ಯ ಭೇಟಿ ನೀಡಿ ಸ್ಥಳೀಯರಿಂದ ಇತಿಹಾಸ ತಿಳಿಯುತ್ತಾರೆ. ಅವರಿಗೆ ಇಲ್ಲಿ ವಸತಿಗೆ ಯಾವುದೇ ಸೌಲಭ್ಯ ಇಲ್ಲ.

ಬಳಕೆಗೆ ಬಾರದ ಶೌಚಾಲಯಗಳು: ಪಂಪಾಸರೋವರಕ್ಕೆ ಬರುವವರಿಗೆ ಅನುಕೂಲವಾಗಲೆಂದು ಪ್ರವಾಸೋದ್ಯಮ ಇಲಾಖೆ 2018–19ರಲ್ಲಿ ? 29.50 ಲಕ್ಷ ವೆಚ್ಚದಲ್ಲಿ ಶೌಚಾಲಯ ನಿರ್ಮಿಸಿದ್ದು, ಇದು ಬಳಕೆಗೆ ಬಾರದೆ ಗಬ್ಬುನಾರುತ್ತಿದೆ. ಹೀಗಾಗಿ ಅನಿವಾರ್ಯವಾಗಿ ಬಯಲು ಪ್ರದೇಶವನ್ನೇ ಆಶ್ರಯಿಸಬೇಕಾಗಿದೆ. ಇದರಿಂದ ಪುಣ್ಯಸ್ಥಳ ಮಲಿನವಾಗುತ್ತಿದೆ.

ಜಯಲಕ್ಷ್ಮಿದೇವಿ ದೇವಸ್ಥಾನ ಸೋರಿಕೆ:2022ನೇ ಸಾಲಿನಲ್ಲಿ ಅಂದಿನ ಸಚಿವ ಶ್ರೀರಾಮುಲು ರಾಜ್ಯ ಪ್ರಾಚ್ಯ ವಸ್ತು ಇಲಾಖೆಯಿಂದ ಪರವಾನಗಿ ಪಡೆದು 2.8 ಕೋಟಿ ಸ್ವಂತ ಹಣ ಬಳಸಿ ಜಯಲಕ್ಷ್ಮಿದೇವಿ ದೇವಸ್ಥಾನ ಜೀರ್ಣೋದ್ಧಾರ ಮಾಡಿಸಿದ್ದರು. ಇದೀಗ ಮಳೆಗೆ ಗರ್ಭಗುಡಿ ಸೇರಿ ದೇವಸ್ಥಾನದ ಎಲ್ಲಡೆ ನೀರು ಸೋರುತ್ತಿದೆ.

ಕುಡಿಯುವ ನೀರಿನ ಅವ್ಯವಸ್ಥೆ: ಪಂಪಾಸರೋವರಕ್ಕೆ ನಿತ್ಯ 500ಕ್ಕೂ ಹೆಚ್ಚು ಭಕ್ತರು ಭೇಟಿ ನೀಡುತ್ತಿದ್ದು, ಇಲ್ಲಿ ಕುಡಿಯಲು ಶುದ್ಧ ನೀರಿನ ವ್ಯವಸ್ಥೆಯೇ ಇಲ್ಲ. ಜಯಲಕ್ಷ್ಮಿ ದೇವಸ್ಥಾನದ ಬಳಿ ಅಳವಡಿಸಿದ ನೀರಿನ ಘಟಕ ದುರಸ್ತಿಗೆ ಕಾದಿದೆ. ಕುಡಿಯಲು ಭಕ್ತರು ಅನಿವಾರ್ಯವಾಗಿ ಬಾಟಲ್ ನೀರು ಖರೀದಿಸಬೇಕಾಗುತ್ತಿದೆ.

ಸ್ವಚ್ಛತೆಗಿಲ್ಲ ಆದ್ಯತೆ: ದೂರದ ರಾಜ್ಯಗಳಿಂದ ಪಂಪಾಸರೋವರಕ್ಕೆ ಬರುವ ಭಕ್ತರಿಗೆ ಇಲ್ಲಿ ಸರಿಯಾದ ವಸತಿ ವ್ಯವಸ್ಥೆಯಿಲ್ಲ. ಈಗಿರುವ ಧರ್ಮಶಾಲೆ ಸಂಪೂರ್ಣ ಅಸ್ವಚ್ಛತೆಯಿಂದ ಕೂಡಿದ್ದು, ನಿದ್ರಿಸಲು, ಕೂಡಲು ಬಳಕೆ ಬಾರದಂತಿದೆ. ಸ್ನಾನಗೃಹಗಳು ಇಲ್ಲದ್ದರಿಂದ ನೀರಿನ ಟ್ಯಾಂಕಿನ ಕೆಳಗೆ ಕುಳಿತು ಸ್ನಾನ ಮಾಡಬೇಕಾಗುತ್ತಿದೆ.

ಸರೋವರ ಸ್ನಾನಕ್ಕೆ ಹಿಂದೇಟು: ಪಂಪಾಸರೋವರಕ್ಕೆ ಬರುವ ಭಕ್ತರು ಪುಷ್ಕರಣಿಯಲ್ಲಿ (ಸರೋವರ) ಪವಿತ್ರ ಸ್ನಾನ ಮಾಡುವ ವಾಡಿಕೆಯಿದೆ. ಆದರೆ ಸರೋವರದಲ್ಲಿ ದೊಡ್ಡ ಮೊಸಳೆಯೊಂದು ವಾಸವಿದ್ದು, ಜೀವ ಭಯದಿಂದ ಭಕ್ತರು ಸ್ನಾನ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಮೊಸಳೆ ಹಿಡಿಯು ಅರಣ್ಯ ಇಲಾಖೆಗೆ ಹಲವು ಬಾರಿ ಪತ್ರ ಬರೆದರೂ, ಕ್ರಮವಾಗಿಲ್ಲ.

# 1 ಕೋಟಿ ರೂ. ದಾಟಿದ ಹುಲಿಗೆಮ್ಮನ ದೇವಸ್ಥಾನ ಕಾಣಿಕೆ; ಚಿನ್ನ ಬೆಳ್ಳಿ ದೇಣಿಗೆ ನೀಡಿದ ಭಕ್ತರು

**ಕೊಪ್ಪಳ :** ಮಧ್ಯ ಕರ್ನಾಟಕದ ಶಕ್ತಿ ದೇವತೆ ಹುಲಿಗಿ ಗ್ರಾಮದ ಹುಲಿಗೆಮ್ಮ ದೇವಸ್ಥಾನದಲ್ಲಿ ಬುಧವಾರ ಹುಂಡಿ ಎಣಿಕೆ ಮಾಡಲಾಗಿದ್ದು, ಕೋಟಿ ರೂ. ಮೇಲೆ ಕಾಣಿಕೆ ಸಂಗ್ರಹವಾಗಿದೆ.

ಕಳೆದ ಜು.14 ರಂದು ಹುಂಡಿ ಎಣಿಕೆ ಮಾಡಲಾಗಿತ್ತು. ಅದಾದ ಬಳಿಕ ಒಂದು ತಿಂಗಳ 19 ದಿನದ ಬಳಿಕ ಹುಂಡಿ ಎಣಿಕೆ ಮಾಡಲಾಗಿದ್ದು, ಒಂದು ಕೋಟಿ, 45 ಸಾವಿರದ 330 ರೂಪಾಯಿ ಸಂಗ್ರಹವಾಗಿದೆ. ಇದರ ಜತೆಗೆ 80 ಗ್ರಾಂ ಕಚ್ಚಾ ಬಂಗಾರ, 8 ಕೆಜಿ ಕಚ್ಚಾ ಬೆಳ್ಳಿ ಕೂಡ ಕಾಣಿಕೆ ರೂಪದಲ್ಲಿ ಭಕ್ತರು ಹುಲಿಗೆಮ್ಮನಿಗೆ ಸಮರ್ಪಿಸಿದ್ದಾರೆ.

ತಿಂಗಳಿಗೊಮ್ಮೆ ಇಲ್ಲವೇ ಎರಡು ತಿಂಗಳಿಗೊಮ್ಮೆ ಹುಲಿಗೆಮ್ಮ ದೇವಸ್ಥಾನದಲ್ಲಿ ಹುಂಡಿ ಎಣಿಕೆ ಮಾಡಲಾಗುತ್ತಿದ್ದು, ಪ್ರತಿ ಸಲ ಕೋಟಿ ರೂ. ವರೆಗೆ ಕಾಣಿಕೆ ರೂಪದಲ್ಲಿ ಹಣ ಭಕ್ತರಿಂದ ಹರಿದು ಬರುತ್ತಿದೆ. ಶ್ರೀ ಹುಲಿಗೆಮ್ಮ ದೇವಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧಿಕಾರಿ ಪ್ರಕಾಶರಾವ್, ಸಿಬ್ಬಂದಿಗಳಾದ ಈರಣ್ಣ, ಸಣ್ಣ ಬಸವರಾಜ ಸೇರಿದಂತೆ ಇತರರು ಹುಂಡಿ ಎಣಿಕೆ ಕಾರ್ಯದಲ್ಲಿ ತೊಡಗಿದ್ದರು.



ಹುಲಿಗೆಮ್ಮ ಸನ್ನಿಧಿಯಲ್ಲಿ ತುಂಗಾರತಿ

ಹುಲಿಗೆಮ್ಮನ ಸನ್ನಿಧಿಯಲ್ಲಿನ ತುಂಗಭದ್ರಾ ನದಿಯ ದಡದಲ್ಲಿ ಕಳೆದ ವಾರ ಸಂಭ್ರಮದ ತುಂಗಾರತಿ ನಡೆಯಿತು. ಜಿಲ್ಲಾಡಳಿತ, ಮುಜರಾಯಿ ಇಲಾಖೆ, ಶ್ರೀ ಹುಲಿಗೆಮ್ಮ ದೇವಿ ಅಭಿವೃದ್ಧಿ ಪ್ರಾಧಿಕಾರದಿಂದ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಪ್ರಾರಂಭದಲ್ಲಿ ಕೆಲ ಕಾಲ ಅಡಚಣೆಯಾದರೂ ಕೊನೆಯ ಹಂತದಲ್ಲಿ ವರುಣ ದೇವ ಕೃಪೆ ತೋರಿದ್ದರಿಂದ ವೈಭವದಿಂದ ತುಂಗಾರತಿ ನಡೆಯಿತು.

ಕಾಶಿಯಿಂದ ಆಗಮಿಸಿರುವ ವಿವಿಧ ಶ್ರೀಗಳು, ಗಂಗಾರತಿ ಮಾದರಿಯಲ್ಲಿ ತುಂಗಾರತಿ ನಡೆಸಿಕೊಟ್ಟರು. ಧಾರ್ಮಿಕ ವಿಧಿ–ವಿಧಾನದಂತೆ ಬೆಳಗ್ಗೆಯಿಂದಲೇ ನಾನಾ ಪೂಜಾ ಕಾರ್ಯಗಳು ಹುಲಿಗೆಮ್ಮನ ದೇವಸ್ಥಾನದಲ್ಲಿ ತುಂಗಾರತಿ ಭಾಗವಾಗಿ ನಡೆದವು. ಪೂರ್ವ ನಿಗದಿಯಂತೆ ಕಾರ್ಯಕ್ರಮ ಆರಂಭವಾಗುವ ಕೆಲ ಗಂಟೆಗಳ ಮುನ್ನ ಮಳೆ ಅಬ್ಬರಿಸಿ, ಬೊಬ್ಬಿರಿಯಿತು. ಈ ವೇಳೆ ಒಂದು ಹಂತದಲ್ಲಿತುಂಗಾರತಿ ನಡೆಯುತ್ತದೆಯೋ ಇಲ್ಲವೋ ಎನ್ನುವ ಗೊಂದಲಮನೆಮಾಡಿತ್ತು.ಆದರೆ,ಭಕ್ತರ ಕೋರಿಕೆಯಂತೆ ತುಂಗಾರತಿ ಸಮಯಕ್ಕೆ ವರುಣ ದೇವ ಭೂಮಿಗೆ ಅಪ್ಪಳಿಸುವುದನ್ನು ನಿಲ್ಲಿಸಿದ್ದರಿಂದ ಶಾಸ್ತ್ರೋಕ್ತವಾಗಿ ತುಂಗಾರತಿ ಕಾರ್ಯಕ್ರಮಗಳು ನಡೆದವು.

ತುಂಗಭದ್ರಾಆರತಿಗಾಗಿ ಸಾರ್ವಜನಿಕರಿಗೂ ಅವಕಾಶ ಕಲ್ಪಿಸುವ ಉದ್ದೇಶದಿಂದ ಸುಮಾರು ಎರಡು ಸಾವಿರ ಆರತಿಗಳನ್ನು ಭಕ್ತಾದಿಗಳಿಗೆ ಉಚಿತವಾಗಿ ನೀಡಲಾಗಿತ್ತು. ಇದಲ್ಲದೇ ತುಂಗಭದ್ರಆರತಿ ಮಹೋತ್ಸವದ ಪ್ರಯುಕ್ತ ಚಂಡಿಕಾ ಹೋಮ, ಭಕ್ತರಿಗೆ ವಿಶೇಷ ಅನ್ನ ಸಂತರ್ಪಣೆ ಕಾರ್ಯಕ್ರಮ, ಮಹಿಳೆಯರಿಂದವಿಶೇಷಕುಂಭಮೆರವಣಿಗೆ, ನದಿತೀರದಲ್ಲಿದೇವಸ್ಥಾನದ ಉತ್ಸವ ಮೂರ್ತಿಯ ಪ್ರತಿಷ್ಠಾಪನೆ ಮತ್ತು ವಿಶೇಷ ಪೂಜೆ ನಡೆಯಿತು. ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಹೊಸಪೇಟೆಯ ಅಂಜಲಿ ಕಲಾತಂಡದವರಿಂದ ಭರತನಾಟ್ಯ ಹಾಗೂ ನದಿ ತಟದ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಜಿಲ್ಲಾಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ, ಸಂಸದ ರಾಜಶೇಖರ ಹಿಟ್ನಾಳ್, ಶಾಸಕ ರಾಘವೇಂದ್ರ ಹಿಟ್ನಾಳ್, ಕಾಡಾ ಅಧ್ಯಕ್ಷ ಹಸನಸಾಬ ದೋಟಿಹಾಳ, ವಿಪ ಸದಸ್ಯೆ ಹೇಮಲತಾ ನಾಯಕ್, ಜಿಪಂ ಸಿಇಒವರ್ಣಿತನೇಗಿ,ಎಡಿಸಿಸಿದ್ದರಾಮೇಶ್ವರ, ಎಸಿ ಕ್ಯಾ.ಮಹೇಶ ಮಾಲಗಿತ್ತಿ, ತಹಸೀಲ್ದಾರ ವಿಠ್ಠಲ್ ಚೌಗಲೆ, ಹುಲಿಗೆಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಆಡಳಿತಾಧಿಕಾರಿ ಪ್ರಕಾಶರಾವ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಭಯ್ಯಾಪೂರ, ಮಾಜಿ ಸಂಸದ ಸಂಗಣ್ಣ ಕರಡಿ, ಮಾಜಿ ಶಾಸಕ ಕೆ.ಬಸವರಾಜ ಹಿಟ್ನಾಳ್, ಮುಖಂಡರಾದ ಎಸ್.ಆರ್.ಪಾಟೀಲ್, ಮುತ್ತು ಕುಷ್ಟಗಿ, ಕೆ.ಎಂ.ಸಯ್ಯದ್, ಶರಣಪ್ಪ ಸಜ್ಜನ ಸೇರಿ ಇತರರು ಇದ್ದರು.

# 'ಪದವಿ ಜೊತೆಗೆ ಕೌಶಲಗಳು ಅಗತ್ಯ'



**ಯಲಬುರ್ಗಾ :** 'ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರವನ್ನು ಹೊಂದಿದರೆ ಸಾಲದು ಜೊತೆಗೆ ವಿಶೇಷ ಕೌಶಲಗಳನ್ನು ಹೊಂದುವುದು ಅಗತ್ಯ. ಅವುಗಳು ಉನ್ನತ ಹುದ್ದೆಯನ್ನು ಪಡೆಯಲು ಅಥವಾ ಉದ್ದಿಮೆ ಸ್ಥಾಪನೆ ಮಾಡುವುದಕ್ಕೆ ಸಹಕಾರಿಯಾಗುತ್ತವೆ' ಎಂದು ಪ್ರಾಚಾರ್ಯ ಕೆ.ಎಚ್. ಛತ್ರದ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉದ್ಯಮಶೀಲತೆ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಸ್ಪರ್ಧಾತ್ಮಕ ಯುಗದಲ್ಲಿ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಹೊಂದುವುದು ಕಷ್ಟ. ಅದರ ಪರ್ಯಾಯವಾಗಿ ಸ್ವಯಂ ಉದ್ಯೋಗ ಕಂಡುಕೊಳ್ಳುವ ಮೂಲಕ ಉತ್ತಮ ಜೀವನ ನಡೆಸಲು ಸಾಧ್ಯವಿದೆ' ಎಂದರು.

ಸಂಪನ್ಮೂಲ ವ್ಯಕ್ತಿ ಟಿ.ಎನ್. ಪ್ರಸಾದ್ ಮಾತನಾಡಿ, 'ಸಣ್ಣ ಪ್ರಮಾಣದಿಂದ ಪ್ರಾರಂಭಿಸಿಯೇ ದೊಡ್ಡ ದೊಡ್ಡ ಉದ್ಯಮಿಗಳಾಗಿ ದೇಶ ವಿದೇಶದಲ್ಲಿ ಹೆಸರು ಮಾಡಿದವರಿದ್ದಾರೆ.

ದೃಢ ನಿರ್ಧಾರ, ಇಚ್ಛಾಶಕ್ತಿ ಹಾಗೂ ಪರಿಶ್ರಮದ ಜೊತೆಗೆ ಸೂಕ್ತ ಅರಿವು ಇದ್ದರೆ ಯಾರು ಬೇಕಾದರೂ ಉದ್ಯಮಿಗಳಾಗಿ ಹೊರಹೊಮ್ಮಬಹುದು' ಎಂದರು.

ಪ್ರಾಧ್ಯಾಪಕ ಸುರೇಶಕುಮಾರ ಸೊನ್ನದ ಮಾತನಾಡಿ, 'ಜ್ಞಾನವಿದ್ದರೆ ಶೂನ್ಯ ಬಂಡವಾಳದಿಂದಲೇ ಲಭ್ಯವಿರುವ ಸಂಪನ್ಮೂಲ ಬಳಸಿ ಉದ್ಯಮ ಪ್ರಾರಂಭಿಸಬಹುದು.

ಈ ನಿಟ್ಟಿನಲ್ಲಿ ಯುವಕರು ಚಿಂತನೆ ನಡೆಸಬೇಕು' ಎಂದರು.

ಪ್ರಾಧ್ಯಾಪಕ ಎ.ಬಿ. ಕೆಂಚರೆಡ್ಡಿ, ಅಕ್ಷತಾ ಗೋಟೂರ, ಶೋಭಾ ಪಾಟೀಲ ಮಾತನಾಡಿದರು. ಸಹಾಯಕ ಪ್ರಾಧ್ಯಾಪಕರಾದ ಶಶಿಕುಮಾರ, ಹನುಮೇಶ, ವಿನೋದ, ಮಜುಳಾ ಮಡಿವಾಳರ, ಲಕ್ಷ್ಮಿಬಾಯಿ, ರಾಜಶೇಖರ ಹಾಜರಿದ್ದರು.

# ಶಂಕರಲಿಂಗ ಶ್ರೀ ಪುಣ್ಯತಿಥಿ, ಜಾತ್ರೆ

**ಕುಷ್ಟಗಿ :** ತಾಲ್ಲೂಕಿನ ಹಿರೇಮನ್ನಾಪುರ ಗ್ರಾಮದ ಶಂಕರಲಿಂಗ ಗುರುಗಳ 41ನೇ ಪುಣ್ಯತಿಥಿ ಮತ್ತು ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಸೆ.3ರಿಂದ 13ರವರೆಗೆ ನಡೆಯಲಿರುವ ವಿವಿಧ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಿಗೆ ಬುಧವಾರ ಚಾಲನೆ ನೀಡಲಾಯಿತು.

ಗೋಮಾತೆ ಪೂಜೆಯೊಂದಿಗೆ ಶಂಕರಲಿಂಗ ಶಿವಯೋಗಿಗಳ ಪುರಾಣ ಪ್ರಾರಂಭ ಇತರೆ ಕಾರ್ಯಕ್ರಮಗಳಿಗೆ ಮದ್ದಾನಿ ಹಿರೇಮಠದ ಕರಿಸಬಸವ ಸ್ವಾಮೀಜಿ ಚಾಲನೆ ನೀಡಿದರು.

ಶಂಕರಲಿಂಗ ಮಹಾತ್ಮೆ ಭಕ್ತಿ ಪ್ರಧಾನ ನಾಟಕ ಗ್ರಂಥ ಲೋಕಾರ್ಪಣೆ, ನಿತ್ಯ ರುದ್ರಾಭಿಷೇಕ ನಡೆಯುವವು. ಅದೇ ರೀತಿ ಸಾಂಸ್ಕೃತಿ, ಮಹಿಳೆಯರಿಗೆ ವಿವಿಧ ಸ್ಪರ್ಧೆ, ಉಡಿ ತುಂಬುವುದು, ಸ್ವರಸಂಗೀತ ಇತರೆ ಕಾರ್ಯಕ್ರಮಗಳು ನಂತರದ ದಿನಗಳಲ್ಲಿ ನಡೆಯುವವು.

ಸೆ.12 ರಂದು ಕಳಸಾರೋಹಣ, ಸೆ.13 ರಂದು ಶಿವಯೋಗಿ ಬೆಟ್ಟಕ್ಕೆ ಕುಂಭ, ಕಳಸದೊಂದಿಗೆ ಪಲ್ಲಕ್ಕಿ ಮೆರವಣಿಗೆ ನಡೆಯುವುದು.

ನಂತರ ಧರ್ಮಸಭೆ, ಸಂಜೆ ಲಘು ರಥೋತ್ಸವ ನಂತರ ಸಮಾರೋಪ ಕಾರ್ಯಕ್ರಮ ಜರುಗುವುದು. ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಚುನಾಯಿತ ಪ್ರತಿನಿಧಿಗಳು, ವಿವಿಧ ಸಮಾಜಗಳ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

# ವಿದ್ಯುತ್ ಅವಘಡ: ಮೃತ ಯುವಕನ ಕುಟುಂಬಕ್ಕೆ ಪರಿಹಾರ ನೀಡಲು ರಜಪೂತ ಆಗ್ರಹ

**ವಿಜಯಪುರ :** ಗಣಪತಿ ವಿಸರ್ಜನಾ ಪೂರ್ವ ಮೆರವಣಿಗೆ ವೇಳೆ ವಿದ್ಯುತ್ ಅವಘಡ ಸಂಭವಿಸಿ ಯುವಕ ಮೃತಪಟ್ಟಿರುವ ಹಾಗೂ ಗಾಯಾಳುಗಳ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ನಗರಸಭೆ ಹಾಗೂ ವಿಡಿಎ ಮಾಜಿ ಅಧ್ಯಕ್ಷ ಪರಶುರಾಮಸಿಂಗ್ ರಜಪೂತ ಅವರು ಒತ್ತಾಯಿಸಿದ್ದಾರೆ.

ನಾಲ್ಕೈದು ವರ್ಷಗಳ ಹಿಂದೆ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲು ನೂರಾರು ಕೋಟಿ ರೂ. ತಂದಿದ್ದೇನೆ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದರು. ಈ ಕಾರ್ಯ ಮಾಡಿದ್ದರೆ ಈ ಅಮಾಯಕ ಯುವಕನ ಜೀವ ಉಳಿಯುತ್ತಿತ್ತು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಈ ವಿಷಯದಲ್ಲಿ ನಾನು ರಾಜಕಾರಣ ಮಾಡುತ್ತಿಲ್ಲ. ಆದರೆ ಓರ್ವ ಯುವಕ ಅಸುನೀಗಿರುವುದು ನನ್ನ ಮನಸ್ಸಿಗೆ ನೋವುಂಟು ಮಾಡಿದೆ. ಹೆತ್ತ ಮಗುವನ್ನು ಕಳೆದುಕೊಂಡ ಪಾಲಕರ ರೋಧನ ನೋಡಲಾಗುತ್ತಿಲ್ಲ. ಕೇವಲ ಹೇಳಿಕೆ ನೀಡುವಲ್ಲಿಯೇ ನಮ್ಮ ಶಾಸಕರು ಕಾಲಹರಣ ಮಾಡುವಲ್ಲಿ ತೊಡಗಿದ್ದಾರೆ. ನೂರಾರು ಕೋಟಿ ರೂ. ತಂದು ಅಂಡರ್ ಗ್ರೌಂಡ್ ವಿದ್ಯುತ್ ಕೇಬಲ್ ಅಳವಡಿಕೆ ಮಾಡುವೆ ಎಂದು ಹೇಳಿದ್ದನ್ನು ಕೂಡಲೇ ಕಾರ್ಯಗತಗೊಳಿಸಿದ್ದರೆ ವಿದ್ಯುತ್ ಅವಘಡ ನಡೆಯುವುದನ್ನು ತಪ್ಪಿಸಿ ಒಂದು ಜೀವ ಉಳಿಸಬಹುದಿತ್ತು. ಇನ್ನಾದರೂ ನಗರ ಶಾಸಕರು ಹೇಳಿಕೆ ನೀಡುವುದನ್ನು ಬಿಟ್ಟು ಅಭಿವೃದ್ಧಿ ಕಾರ್ಯಕ್ಕೆ ಆದ್ಯತೆ ನೀಡಬೇಕು ಎಂದು ರಜಪೂತ ಸಲಹೆ ನೀಡಿದ್ದಾರೆ?.

ಈ ನೊಂದ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಘಟನೆಯಲ್ಲಿ ಗಾಯಗೊಂಡವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಸರ್ಕಾರಕ್ಕೂ ಪತ್ರ ಬರೆಯುವೆ ಎಂದು ಅವರು ಹೇಳಿದ್ದಾರೆ.

# ವಿಶ್ವ ಸೊಳ್ಳೆ ದಿನ: ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಿ

**ವಿಜಯಪುರ :** ಅನಾಫೀಲಿಸ್ ಎಂಬ ಹೆಣ್ಣು ಸೊಳ್ಳೆ ಮನುಷ್ಯರನ್ನು ಕಚ್ಚಿದಾಗ ಮಲೇರಿಯಾ ರೋಗ ಬರುತ್ತದೆ ಎಂದು ಡಾ. ರೋನಾಲ್ಡ್ ರಾಸ್ ಅವರು ಕಂಡುಹಿಡಿದ ನೆನಪಿಗಾಗಿ ಪ್ರತಿ ವರ್ಷ ಆಗಸ್ಟ್ 20 ರಂದು ವಿಶ್ವ ಸೊಳ್ಳೆ ದಿನವನ್ನು ಆಚರಿಸಲಾಗುತ್ತಿದೆ ಎಂದು ಮುಖ್ಯ ಗುರುಗಳಾದ ಟಿ.ವಿ.ನರಳೆ ತಿಳಿಸಿದರು.

ಶಿವಣಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದಲ್ಲಿ, ಹಡಗಲಿ ತಾಂಡಾ–2ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ವಿಶ್ವ ಸೊಳ್ಳೆ ದಿನವನ್ನು ಉದ್ದೇಶಿಸಿ ಮಾತನಾಡಿದರು.





ಸೊಳ್ಳೆಗಳು ಮನೆ ಮತ್ತು ಕಟ್ಟಡಗಳ ಸುತ್ತಮುತ್ತ ನಿಂತ ನೀರಿನಲ್ಲಿ ಮೊಟ್ಟೆಗಳನಿಟ್ಟು ವಂಶಾಭಿವೃದ್ಧಿಯಾಗಿ ಸೊಳ್ಳೆಗಳು ಸಮೃದ್ಧಿ ಆಗುತ್ತವೆ. ಆದಕಾರಣ ಸೊಳ್ಳೆಗಳ ನಿಯಂತ್ರಣ ಬಹು ಮುಖ್ಯ ಎಂದರು.

ಆರೋಗ್ಯ ನಿರೀಕ್ಷಣಾಧಿಕಾರಿ ಆರ್. ಎಸ್. ಪಾಟೀಲ ಮಾತನಾಡಿ, ವಿಶ್ವ ಸೊಳ್ಳೆ ದಿನದಂದು ಸೊಳ್ಳೆಗಳಿಂದ ಹರಡುವ ಕಾಯಿಲೆಗಳ ಬಗ್ಗೆ, ಸೊಳ್ಳೆ ಕಚ್ಚುವಿಕೆಯಿಂದ ಸ್ವಯಂ ರಕ್ಷಣೆಯ ಉಪಾಯಗಳು, ಸೊಳ್ಳೆಗಳಿಂದ ಬರುವ ಕಾಯಿಲೆಗಳು ಮತ್ತು ಅವುಗಳ ಲಕ್ಷಣಗಳ ಬಗ್ಗೆ ವಿವರವಾಗಿ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಸಹ ಶಿಕ್ಷಕ ಎ.ಸಿ. ಮೂಲಿಮನಿ ಮಾತನಾಡಿ, ಮಳೆಗಾಲದಲ್ಲಿ ಸೊಳ್ಳೆಗಳ ಉತ್ಪತ್ತಿ ಅಧಿಕವಾಗುವ ಸಮಯ, ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನಿಗಾ ವಹಿಸಬೇಕು.

ನೀರು ನಿಲ್ಲುವ ನಿರುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಿ, ಸೊಳ್ಳೆಗಳಿಂದ ಬರುವ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಚಿಕನ್ ಗುನ್ಯಾ, ಮೆದಳು ಜ್ವರದಂತ ಕಾಯಿಲೆಗಳು ಬರದಂತೆ ತಡೆಯಬೇಕೆಂದರು.

ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕ ಎಂ.ಬಿ. ನದಾಫ್, ಆರ್.ಎಸ್. ಹಜೇರಿ, ಕೆ.ಎ. ಮುಜಾವರ, ಪಿ.ಬಿ. ಕುಮಾನಿ ಮತ್ತು ಶಾಲೆಯ ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

# ನಶಿಸಿ ಹೋಗುತ್ತಿರುವ ಗ್ರಾಮೀಣ ಕ್ರೀಡೆಗಳಿಗೆ ಉಳಿವು ಅಗತ್ಯ.ಮಾಜಿ ಶಾಸಕ ಆನಂದ ನ್ಯಾಮಗೌಡ



**ಜಮಖಂಡಿ :** ಆಧುನಿಕ ಯುಗದಲ್ಲಿ ಇಂತಹ ಹಬ್ಬಗಳಲ್ಲಿ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಕ್ರೀಡೆಗಳಿಗೆ ಮರುಜೀವ ತುಂಬಿದಂತಾಗಿದೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ತಾಲೂಕಿನ ಹುನ್ನೂರು ಗ್ರಾಮದ ಶ್ರೀ ಚನ್ನಬಸವೇಶ್ವರ ಗಜಾನನ ಮಿತ್ರ ಮಂಡಳಿ,

ಇವರ ಆಶ್ರಯದಲ್ಲಿ ಶ್ರೀ ಗಣೇಶ ಹಬ್ಬದ ನಿಮಿತ್ಯವಾಗಿ ರಾಜ್ಯ ಮಟ್ಟದ ತೆರಬಂಡಿ

ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು ತೆರ ಬಂಡೆ ಸ್ಪರ್ದೆ ಅಳವಡಿಸಿದು ಸಂತೋಷದ ವಿಷಯ ಏಕೆಂದರೆ ಈಗಿನ ಯುಗದಲ್ಲಿ ನಶಿಸಿ ಹೋಗುತ್ತಿರುವ ಗ್ರಾಮೀಣ ಕ್ರೀಡೆಗಳಿಗೆ ನೀವುಗಳು ಮರು ಜೀವ ನೀಡುತ್ತಿರುವದು ಮೆರಗು ನೀಡಿದಂತಾಗಿದೆ ಪ್ರತಿಯೊಬ್ಬರೂ ಇಂತಹ ಗ್ರಾಮೀಣ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವದು ಅಗತ್ಯವಿದೆ ಎಂದರು.

ಗಣೇಶ ಹಬ್ಬದ ಮೂಲ ಉದ್ದೇಶ ಎಲ್ಲರು ಒಂದಾಗಿ ಹಬ್ಬವನ್ನು ಆಚರಣೆ ಮಾಡುವುದು ಹಬ್ಬಗಳ ಮೂಲಕ ಒಡಿಯುವ ಕೆಲಸ ಆಗುತ್ತಿರುವ ದರಿಂದ,ಗಣೇಶ ಹಬ್ಬ ಆಚರಣೆಗೆ ಬಾಲ ಗಂಗಾಧರ ತಿಲಕ ಅವರು ಮುಂದಾದರು ಈ ದೇಶದಿಂದ ಬ್ರಿಟಿಷರನ್ನ ಹೊರ ಕಳಿಸಲು.

ಹಬ್ಬದ ಉದ್ದೇಶವೆ ವಿವಿಧ ಜಾತಿ ಧರ್ಮದ ಸಮಾಜದವರನ್ನ ಒಗ್ಗೂಡಿಸುವದು ಎಂದರು. ಇವತ್ತಿನ ದಿವಸ ಭವ್ಯವಾದ ಬಲಿಷ್ಟವಾದ ಭಾರತವನ್ನ ಕಟ್ಟಲು ಯುವಕರ ಶಕ್ತಿಯಿಂದ ಸಾದ್ಯ ಎಂದರು

ಕಾರ್ಯಕ್ರಮದಲ್ಲಿ ಪ.ಪೂ.ಶ್ರೀ ಶಿವಪುತ್ರ ಸ್ವಾಮಿಗಳು,ಮಾಜಿ ನಗರಸಭೆ ಅದ್ಯಕ್ಷ ಪರಮಾನಂದ ಗವರೋಜಿ,ಸಿ.ಆರ್.ಓ ರಾಜು ಗಸ್ತಿ,ಬ್ಲಾಕ್ ಕಾಂಗ್ರೇಸ ನಗರ ಘಟಕದ ಅದ್ಯಕ್ಷ ಮಹೇಶ ಕೋಳಿ,ಮೀರಾ ಒಂಟಮೊರಿ,ಅಕ್ಬರ ಜಮಾದಾರ ಇನ್ನಿತರರು ಇದ್ದರು

# ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನೆಗೆ ಅನುದಾನ ನೀಡುವಂತೆ ಆಗ್ರಹಿಸಿ ಮನವಿ

**ಅಥಣಿ :** ತಾಲೂಕಿನ ಬಳ್ಳಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಜೀರ್ಣೋದ್ಧಾರ ಹಾಗೂ ರಾಯಣ್ಣನ ಮೂರ್ತಿ ಪ್ರತಿಷ್ಠಾಪನೆಯ ಪ್ರಥಮ ಹಂತದ ಕಾಮಗಾರಿಗೆ 15ನೆಯ ಹಣಕಾಸಿನ ಅನುದಾನದಲ್ಲಿ ವಿಶೇಷ ಅನುದಾನ ನೀಡುವಂತೆ ಆಗ್ರಹಿಸಿ ಗ್ರಾಮದ ಹಾಲುಮತದ ಸಮುದಾಯದ ವತಿಯಿಂದ ಬಳ್ಳಿಗೇರಿ ಗ್ರಾಪಂ ಮನವಿ ಸಲ್ಲಿಸಿದರು.

ದೇಶಕ್ಕಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ ಮಹಾನ ಕ್ರಾಂತಿಕಾರಿ ಪುರುಷ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಎಂಬ ಹೆಸರಿನ ಕ್ರಾಂತಿಯ ಕಿಡಿ ಶಾಶ್ವತವಾಗಿ ಮಿಂಚುತ್ತಲೇ ಇರುತ್ತದೆ. ಭಾರತ ಸ್ವಾತಂತ್ರ್ಯದ ಸಲುವಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ ಮಹಾನ್ ಚೇತನ. ಅವರು ಧೈರ್ಯದಿಂದ ತಮ್ಮದೇ ಆದ ಸೈನ್ಯವನ್ನು ಕಟ್ಟಿ ತಾಯ್ನಾಡಿಗೆ ಸ್ವಾತಂತ್ರ್ಯ ತರಲು ಹೋರಾಟ ಆರಂಭಿಸಿದರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ದೇಶಾಭಿಮಾನ ಪ್ರೀತಿ, ಗೌರವದ ಬಗ್ಗೆ ಇತಿಹಾಸದ ಭೂಪಟಗಳಲ್ಲಿ, ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ಕಾರ್ಯ ಮಾಡಿದ್ದಾರೆ ಅಂಥವರ ಬಗ್ಗೆ ಗ್ರಾಮದಲ್ಲಿ ಯುವ ಪೀಳಿಗೆಗೆ ದೇಶಾಭಿಮಾನ ನಾಡು ನುಡಿ ಬಗ್ಗೆ ಗೌರವ ಹೆಚ್ಚಿಸಲು ಬಳ್ಳಿಗೇರಿ ಗ್ರಾಮದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ರಾಯಣ್ಣನವರ ಮೂರ್ತಿ ಪ್ರತಿಷ್ಠಾಪನೆಗೆ ವಿಶೇಷ ಅನುದಾನ ನೀಡಬೇಕೆಂದು ಈ ಮೂಲಕ ಸಮುದಾಯದ ಪರವಾಗಿ ಒಕ್ಕೊರಲಿನಿಂದ ಆಗ್ರಹಿಸಿದರು.





ಈ ಸಂದರ್ಭದಲ್ಲಿ ಹಣಮಂತಗೌಡ ಹುಚಗೌಡರ, ಮಾಳಪ್ಪಾ ಶೆಂಡಗೆ, ಮಲ್ಲಿಕಾರ್ಜುನ ರೋಗಿ, ಗುಂಡು ವಾಘಮೋಡೆ, ರವಿ ಕೌಲಗುಡ್ಡ, ಅಮೋಘಸಿದ್ಧ ಚೌಗಲಾ, ಬಂಗಾರಪ್ಪ ಬೆಳಗಲಿ, ಶಂಕರ ಪಾಂಡ್ರೆ, ಬೀರಪ್ಪ ಚೌಗಲಾ, ಪರಮೇಶ್ವರ ಕುಳ್ಳೊಳ್ಳಿ, ಹನಮಂತ ಕುರಬರ, ಅನಂತ ಜಾಧವ, ಅಶೋಕ ದೊಡಮನಿ, ಅಪ್ಪು ಆಸೋದೆ ಇತರರು ಉಪಸ್ಥಿತರಿದ್ದರು.

# ಒಳಮೀಸಲಾತಿ ವಿರೋಧಿಸಿ ಬಂಜಾರಾ ಸಮುದಾಯ ಪ್ರತಿಭಟನೆ



**ಬಸವನಬಾಗೇವಾಡಿ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ 101 ಜಾತಿಗಳನ್ನು ವಿಂಗಡಿಸಿ ಜಗಳ ಹಚ್ಚುವ ಕೆಲಸ ಮಾಡಿದ್ದಾರೆ. ಅವರು ಎಲ್ಲ ತಾಂಡಾಗಳಲ್ಲಿನ ದುಸ್ಥಿತಿ ಅರಿತು ಕೂಡಲೇ ಒಳ ಮೀಸಲಾತಿ ಎಂಬ ದೊಡ್ಡ ಭೂತವನ್ನು ತೆಗೆದುಹಾಕಬೇಕು, ಇಲ್ಲದಿದ್ದರೆ 'ಕಾಂಗ್ರೆಸ್ ಹಠಾವೋ, ತಾಂಡಾ ಬಚಾವೋ' ಚಳವಳಿ ಮೂಲಕ ಕಾಂಗ್ರೆಸ್ ಸರ್ಕಾರ ತೆಗೆದು ಹಾಕಬೇಕಾಗುತ್ತದೆ ಎಂದು ಕೆಸರಟ್ಟಿ ಸೋಮಲಿಂಗ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಒಳ ಮೀಸಲಾತಿ ವಿರೋಧಿಸಿ ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘ ತಾಲ್ಲೂಕು ಘಟಕದಿಂದ ಬುಧವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಬಸವೇಶ್ವರ ವೃತ್ತದಲ್ಲಿ ತಹಶೀಲ್ದಾರರಿಗೆ ಮನವಿ ಸಲ್ಲಿಕೆ ವೇಳೆ ಅವರು ಮಾತನಾಡಿದರು.

ಬಂಜಾರಾ ಮುಖಂಡ ಮಲ್ಲಿಕಾರ್ಜುನ ನಾಯಕ್ ಮಾತನಾಡಿ, ಹಿಂದಿನ ಬಿಜೆಪಿ ಸರ್ಕಾರ ಒಳ ಮೀಸಲಾತಿ ವಿಚಾರದಲ್ಲಿ ಅನ್ಯಾಯ ಮಾಡಿದಾಗ 'ಬಿಜೆಪಿ ಹಠಾವೋ, ತಾಂಡಾ ಬಚಾವೋ' ಹೋರಾಟ ಮಾಡಿ ಸರ್ಕಾರ ಕೆಡವಿದ್ದೇವೆ. ಈಗಿನ ಸರ್ಕಾರ 101 ಜಾತಿಗಳಲ್ಲಿ 63 ಜಾತಿಗಳನ್ನು ಸೇರಿಸಿ ಶೇ 5 ಮೀಸಲಾತಿ ನೀಡಿರುವುದು ಘೋರ ಅನ್ಯಾಯ. 2011 ರ ಜನಗಣತಿಯಂತೆ ರಾಜ್ಯದಲ್ಲಿ ಬಂಜಾರಾ ಸಮುದಾಯ 25 ಲಕ್ಷವಿದೆ. ಆದರೆ ಇವರು ಈಗ 14 ಲಕ್ಷ ಜನಸಂಖ್ಯೆ ತೋರಿಸಿ ಸಮಾಜದ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡಿದ್ದಾರೆ. ಅನ್ಯಾಯ ಸರಿಪಡಿಸದಿದ್ದರೆ ಯಾವುದೇ ಸರ್ಕಾರವಿದ್ದರೂ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂಜಾರಾ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಚವ್ಹಾಣ ಹಾಗೂ ಮುಖಂಡ ರವಿ ರಾಠೋಡ ಮಾತನಾಡಿ, ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ಒಳಮೀಸಲಾತಿ ವರ್ಗೀಕರಿಸಿದ್ದು, ಬಂಜಾರಾ ಸಮುದಾಯ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಅಲ್ಲದೇ ಕಾಂಗ್ರೆಸ್ ಸರ್ಕಾರದಲ್ಲಿ ಬಂಜಾರಾ ಸಮಾಜಕ್ಕೆ ಯಾವುದೇ ಸಚಿವ ಸ್ಥಾನ, ಸಂಸದ, ಎಂಎಲ್ಸಿ ಸ್ಥಾನವೂ ನೀಡದೇ ಕಡೆಗಣಿಸಿದೆ ಎಂದರು.

ಬಂಜಾರಾ ಜಿಲ್ಲಾ ಮುಖಂಡರಾದ ಮಹೇಂದ್ರ ನಾಯಕ್, ನೀಲು ನಾಯಕ ಮಾತನಾಡಿ, ಅವೈಜ್ಞಾನಿಕ ಒಳಮೀಸಲಾತಿ ಜಾರಿ ವಿರೋಧಿಸಿ ಸೆ.6 ರಂದು ವಿಜಯಪುರದಲ್ಲಿ ಜಿಲ್ಲಾಮಟ್ಟದ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ.

ಮುಂದೆ ಸೆ.10ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ವಿಧಾನಸೌಧ ಚಲೋ ಬೃಹತ್ ಪ್ರತಿಭಟನೆಗೆ ನಿರ್ಧರಿಸಲಾಗಿದೆ. ಅಷ್ಟರೊಳಗೆ ಸರ್ಕಾರ ಎಚ್ಚೆತ್ತು ಕೂಡಲೇ ಅನ್ಯಾಯ ಸರಿಪಡಿಸದಿದ್ದರೆ ಬಂಜಾರಾ ಸಮಾಜ ಸಚಿವರ ಮನೆಗಳಿಗೆ ಮುತ್ತಿಗೆಹಾಗೂ ಉಗ್ರಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಂಜಾರಾ ತಾಲ್ಲೂಕು ಘಟಕದ ಅಧ್ಯಕ್ಷ ಬಾಳು ರಾಠೋಡ, ಮುಖಂಡರಾದ ಈಶ್ವರ ಲಮಾಣಿ, ರುಕ್ಮಿಣಿ ರಾಠೋಡ, ಸಂತೋಷ ನಾಯಕ್, ಸುರೇಶ ಬಿಜಾಪುರ, ಶಿವಾಜಿ ಲಮಾಣಿ, ಅರವಿಂದ ನಾಯಕ್, ಭಾಗ್ಯ ರಾಠೋಡ, ಶ್ರೀದೇವಿ ಲಮಾಣಿ ಭಾಗಿಯಾಗಿದ್ದರು.

# ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದ ಮಹಾಗಣಪತಿ ಉತ್ಸವ ಸಮಿತಿಯ ಗಣೇಶ ಹಬ್ಬ: ಮಾಜಿ ಶಾಸಕ ಆನಂದ ನ್ಯಾಮಗೌಡ

**ಜಮಖಂಡಿ :** ಹಿಂದು ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದ ಶ್ರೀ ಮಹಾಗಣಪತಿ ಉತ್ಸವ ಸಮಿತಿಯ ಗಣೇಶ ಹಬ್ಬ, ಬ್ರಿಟಿಷರ ವಿರುದ್ಧ ಹೋರಾಡಲು ಸ್ವಾತಂತ್ರ್ಯ ಹೋರಾಟಗಾರರನ್ನು ಒಂದೆಡೆ ಸೇರಿಸಲು, ಸಂದೇಶಗಳನ್ನು ತಲುಪಿಸುವ ಸಾಧನವಾಗಿ ಬಾಲಗಂಗಾಧರ ತಿಲಕರು ಸಾರ್ವಜನಿಕ ಗಣೇಶ ಉತ್ಸವವನ್ನು ಪ್ರಾರಂಭಿಸಿದರು. ದೇಶದ ಸಮಗ್ರತೆ, ಐಕ್ಯತೆಗಾಗಿ ನಗರದಲ್ಲಿ ಮಹಾ ಗಣಪತಿ ಉತ್ಸವ ಸಮಿತಿಯ ವತಿಯಿಂದ ಜಾತಿ ಪಂಥ ಮೀರಿ ಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ಬುಧವಾರ ಮಹಾಗಣಪತಿ ಉತ್ಸವ ಸಮಿತಿಯ ವತಿಯಿಂದ ಏರ್ಪಡಿಸಿದ್ದ ಮಹಾಪ್ರಸಾದ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಹಾಗಣಪತಿ ಉತ್ಸವ ಸಮಿತಿಯವರು ಪ್ರತಿವರ್ಷದಂತೆ ಈ ಬಾರಿಯೂ ಮಹಾಪ್ರಸಾದದ ವ್ಯವಸ್ಥೆಯನ್ನು ಮಾಡಿದ್ದಾರೆ. ಪ್ರಸಾದ ವಿತರಣಾ ಸೇವೆಯಲ್ಲಿ ಮುಸ್ಲಿಂ ಸಮಾಜದ ಬಾಂಧವರು ಕೊಡುಗೆ ನೀಡಿದ್ದು ವಿಶೇಷವಾಗಿದೆ. ನಗರದಲ್ಲಿ



ಪ್ರತಿಬಾರಿ ಪ್ರಸಾದ ಸೇವೆಗೆ ಮುಸ್ಲಿಂ ಸಮಾಜದವರು ಭಾಗವಹಿಸುವ ಮೂಲಕ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ.

ನಗರದಲ್ಲಿ ಹಿಂದು ಮುಸ್ಲಿಂ ಬೇಧ ವಿಲ್ಲದೇ ಹಬ್ಬವನ್ನು ಆಚರಿಸಿಕೊಂಡುಬರಲಾಗುತ್ತಿದೆ. ಇದು ಕೋಮು ಸೌಹಾರ್ದತೆಯ ಸಂಕೇತವಾಗಿದೆ ಎಂದು ಹೇಳಿದರು.

ನಗರದ ಶ್ರೀ ಮಹಾಗಣಪತಿ ಉತ್ಸವ ಸಮಿತಿಯಲ್ಲಿ ಮುಸಲ್ಮಾನ್ ಸಮಾಜದಸದಸ್ಯರಿದ್ದು ವಿಘ್ನ ವಿನಾಶಕನಿಗೆ ಒಟ್ಟಾಗಿ ಪೂಜೆ ಸಲ್ಲಿಸುವ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ. ಹಬ್ಬ ಹರಿದಿನಗಳು ಸಂಬಂಧಗಳನ್ನು ಬಲಗೊಳಿಸುತ್ತದೆ ಎಂಬ ನಂಬಿಕೆಯನ್ನು . ಶ್ರೀ ಮಹಾಗಣಪತಿ ಉತ್ಸವ ಸಮಿತಿಯವರು ಸಾಬೀತು ಪಡಿಸಿದ್ದಾರೆ. ಹಿಂದು ಮುಸ್ಲಿಂ ಸಮುದಾಯಗಳು ಒಂದಾಗಿ ಗೌರಿ ಗಣೇಶ ಹಬ್ಬ ಆಚರಿಸುವ ಮೂಲಕ ಸಾಮರಸ್ಯತೆಯನ್ನ ಪ್ರದರ್ಶಿಸಿದ್ದಾರೆ.

ಈ ಸಂದರ್ಭದಲ್ಲಿ ಸಮಿತಿ ಗೌರಾಧ್ಯಕ್ಷ ಬಿ.ವ್ಹಿ.ಪಾಟೀಲ,ಅಧ್ಯಕ್ಷ ಆನಂದ ಶೇಠ,ಕುಂಚನೂರ ಗ್ರಾ.ಪಂ.ಅಧ್ಯಕ್ಷ ಶಂಕರ ಕಾಂಬಳೆ,ಪ್ರಕಾಶ ಕನಬೂರ,ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅನ್ವರ ಮೋಮಿನ,ಹಾಜಿಮ ಅವಟಿ, ಶಾಮರಾವ ಘಾಟಗೆ,ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ, ನಗರಸಭೆ ಸದಸ್ಯ ದಿಲಾವರ ಶಿರೋಳ, ಪರಮಾನಂದ ಗೌರೋಜಿ,ದಾನೇಶ ಘಾಟಗೆ,ಸುನೀಲ ಶಿಂಧೆ,ಮಹೇಶ ಕೋಳಿ,ಸಿಪಿಐ ಮಲ್ಲಪ್ಪ ಮಡ್ಡಿ,ಬಸವರಾಜ ಸಿಂಧೂರ,ಮುತ್ತಣ್ಣ ಮೇತ್ರಿ, ಪ್ರಹ್ಲಾದ ಕುಲಕರ್ಣಿ,ಜಿಲ್ಲಾಯುಥ ಕಾಂಗ್ರೆಸ್ಅಧ್ಯಕ್ಷಕುಮಾರಆಲಗೂರ,ಮೀರಾ ವಂಟಮೂರಿ, ಅಕ್ಬರ ಜಮಾದಾರ,ರಾಜು ಗಸ್ತಿ,ಸಾಧಿಕ ಬಂಟನೂರ,ಅಬು ಶಿರೋಳ,ಬಕ್ಕರ ಕುಡಚಿ,ಬಸು ಹರಕಂಗಿ,ಸುನೀಲ ತೆಲಿ,ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಸಂಜು ಮೀಶಿ,ಶಶಿಧರ ಮೀಶಿ,ಅನೀಲ ಸಿಂಧೂರ,ರೋಹಿತ ಸೂರ್ಯವಂಶಿ,ಆಶ್ಫಾಕ ಪಕಾಲಿ,ಮಲ್ಲು ಸಿರಹಟ್ಟಿ,ಸಿದ್ದು ನ್ಯಾಮಗೌಡ,ಶ್ರೀಧರ ಕೊಣ್ಣೂರ,ವಿಶಾಲ ತೇಲಿ,ನಾಗು ಮೀಶಿ, ಸಾಜಿದ ಮೋಮಿನ, ಜಾವೀದ,ಅಲ್ಲು ಜೋಗಿಮಡ್ಡಿ,ಅನ್ವರ,ಆನಿಖಿಂಡಿ,ನಿಖಿಲ ಪಾಟೀಲ,ಸೇರಿದಂತೆ ಹಲವರು ಇದ್ದರು.

# ಕ್ರೀಡಾ ಕ್ಷೇತ್ರದಲ್ಲಿ ಸಾಧಕರಾಗಿ ಜಿಲ್ಲೆಯ ಕೀರ್ತಿ ಹೆಚ್ಚಿಸಿ: ಸಂಗಮೇಶ ಬಬಲೇಶ್ವರ

**ವಿಜಯಪುರ :** ಕ್ರೀಡೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಹೆಚ್ಚು ಹೆಚ್ಚು ಪ್ರಶಸ್ತಿ ಪಡೆದು ಜಿಲ್ಲೆಗೆ ಕೀರ್ತಿ ತರಬೇಕು ಎಂದು ಧಾರವಾಡದ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬುಧವಾರ ನಗರದ ಡಾ. ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ಪಠ್ಯದೊಂದಿಗೆ ಕ್ರೀಡೆಗಳಲ್ಲಿಯೂ ಭಾಗಿಯಾಗಿ ಸತತ ಪರಿಶ್ರಮದಿಂದ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಹೇಳಿದರು.

ಯುವಕರು ಆಟೋಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಸದೃಢವಾದ ಆರೋಗ್ಯ ಹೊಂದಿ, ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಯುವಕರ ಪಾತ್ರ ಅತ್ಯಂತ



ಹಿರಿದಾಗಿದೆ. ಮಕ್ಕಳು ತಮ್ಮನ್ನು ತಾವು ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕು. ಕ್ರೀಡಾ ಕ್ಷೇತ್ರಕ್ಕೆ ಸರ್ಕಾರ ಅನೇಕ ಸೌಲಭ್ಯ ಒದಗಿಸುವ ಮೂಲಕ ಕ್ರೀಡಾಪಟುಗಳಿಗೆ ಉತ್ತೇಜನ ನೀಡುತ್ತಿದ್ದು, ಇದರ ಸದುಪಯೋಗ ಪಡೆದುಕೊಂಡು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರದ ಮಟ್ಟದಲ್ಲಿ ಆಸಕ್ತಿಯುತ ಕ್ರೀಡೆಯಲ್ಲಿ ಸತತ ಪ್ರಯತ್ನ ಹಾಗೂ ಕಠಿಣ ಅಭ್ಯಾಸ ರೂಢಿಸಿಕೊಂಡು ಕ್ರೀಡಾ ಸಾಧಕರಾಗಿ, ಕ್ರೀಡಾ ಸೆಲೆಬ್ರೆಟಿಗಳಾಗಬೇಕು ಎಂದು ಅವರು ಹೇಳಿದರು.

ಡಾ. ಜಾವೀದ ಜಮಾದಾರ ಅವರು ಮಾತನಾಡಿ, ಕ್ರೀಡಾ ಕ್ಷೇತ್ರದಲ್ಲಿ ಹೊಸ ಸಾಧನೆಯ ಬರೆದು ಮೈಲುಗಲ್ಲು ಸ್ಥಾಪಿಸುವ ಮೂಲಕ ಜಿಲ್ಲೆ, ರಾಜ್ಯದ ಕೀರ್ತಿಯನ್ನು ಹೆಚ್ಚಿಸಬೇಕು. ಮಾನಸಿಕ ಹಾಗೂ ದೈಹಿಕ ಸದೃಢತೆಗಾಗಿ ಕ್ರೀಡೆಗಳಲ್ಲಿ ಭಾಗಿಯಾಗಿ, ಸೋಲು-ಗೆಲುವು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯ ಎಂಬುದು ಮನವರಿಕೆ ಮಾಡಿಕೊಂಡು ಯುವಕರು ಕ್ರೀಡಾ ಮನೋಭಾವದಿಂದ ಕ್ರೀಡೆಯಲ್ಲಿ ತಮ್ಮನ್ನು ತೊಡಗಿಕೊಳ್ಳುವುದರ ಮೂಲಕ ಭವಿಷ್ಯ ಉಜ್ವಲಗೊಳಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಪಾಲಿಕೆಯ ಮೇಯರ್ ಮಡಿವಾಳಪ್ಪ ಸಿದ್ದರಾಮಪ್ಪ ಕರಡಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಕ್ರೀಡಾಧಿಕಾರಿ ರಾಜಶೇಖರ ದೈವಾಡಿ, ಕ್ರೀಡಾ ಇಲಾಖೆ ಕಚೇರಿಯ ಅಧೀಕ್ಷಕ ಪ್ರಿಯಂಕಾ ಜಿ, ಟಿ.ಪಿ. ಆಲೂರು, ಸಂಗೀತಾ ಮಠಪತಿ, ದೈಹಿಕ ಶಿಕ್ಷಕರು, ಕ್ರೀಡಾ ತರಬೇತಿದಾರರು, ಕ್ರೀಡಾಪಟುಗಳು ಹಾಗೂ ಕ್ರೀಡಾಸಕ್ತರು ಉಪಸ್ಥಿತರಿದ್ದರು.

# ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಆಯೋಜನೆ

**ಬಾಗಲಕೋಟೆ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಾಗಲಕೋಟೆ ಇವರ ಸಂಂ-ಯುಕ್ತ ಆಶ್ರಯದಲ್ಲಿ 2025-26ನೇ ಸಾಲಿನ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಗಳನ್ನು ಸೆಪ್ಟೆಂಬರ್ 08 ಮತ್ತು 09 ರಂದು ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಈ ಕ್ರೀಡಾಕೂಟದ ಉದ್ಘಾಟನೆಯನ್ನು ಸೆಪ್ಟೆಂಬರ್ 09 ರಂದು ಬೆಳಿಗ್ಗೆ 09 ಗಂಟೆಗೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್ ಬಿ ತಿಮ್ಮಾಪುರ ಅವರು ನಡೆಸಲಿದ್ದು, ಬಾಗಲಕೋಟೆ ವಿಧಾನಸಭಾ ಸದಸ್ಯರಾದ ಹೆಚ್ ವೈ ಮೇಟಿ ಅಧ್ಯಕ್ಷತೆ ವಹಿಸಲಿದ್ದು, ಅನೇಕ ಗಣ್ಯರು ಉಪಸ್ಥಿತರಿರಲಿದ್ದಾರೆ.

ತಾಲ್ಲೂಕು ಮಟ್ಟದ ವೈಯಕ್ತಿಕ ಕ್ರೀಡೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಮತ್ತು ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಅಲ್ಲದೇ ನೇರವಾಗಿ ಜಿಲ್ಲಾ ಮಟ್ಟದಲ್ಲಿ ಬಾಸ್ಕೆಟ್ ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಗಳ ಜೊತೆಗೆ ಟೆನ್ನಿಸ್, ನೆಟ್ ಬಾಲ್ ಹಾಗೂ ಈಜು ಸ್ಪರ್ಧೆಗಳನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಲಾಗುವುದು. ಜಿಲ್ಲೆಯ ಆಸಕ್ತ ಸ್ಪರ್ಧಾಳುಗಳು ಸೂಕ್ತ ದಾಖಲೆಗಳೊಂದಿಗೆ https://dasaracmcup-2025.etrpindia.com/KA-sports/ ಲಿಂಕ್ ಬಳಸಿ ಆನ್ಲೈನ್ ನೊಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 9739722700, 9945284771, 9449959064 ಹಾಗೂ 8792507212 ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ತರಬೇತಿಗೆ ಅರ್ಜಿ

**ಬಾಗಲಕೋಟೆ :** ಭಾರತೀಯ ಸೇನೆ, ಯುನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ -1, 2(ಎ), 3(ಎ) ಹಾಗೂ 3(ಬಿ) ಗಳ ಅರ್ಹ ಅಭ್ಯರ್ಥಿಗಳಿಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಲಬುರ್ಗಿ ಜಿಲ್ಲಾ ಕೇಂದ್ರದಲ್ಲಿ 2025-26ನೇ ಸಾಲಿನಲ್ಲಿ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ, ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, ತರಬೇತಿಗಾಗಿ ಅರ್ಹ 3ನೇ ಬ್ಯಾಚ್ ಪ್ರಾರಂಭಿಸಲು ಪುರುಷ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸೆ.10 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ( 8105085410, 9148489157 ) ಸಂಪರ್ಕಿಸಬಹುದು ಎಂದು ಕಲಬುರ್ಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 'ಲಿಂಗಾಯತ ರಡ್ಡಿ ಎಂದು ನಮೂದಿಸಿ'




**ಹುಬ್ಬಳ್ಳಿ :** 'ರಾಜ್ಯ ಸರ್ಕಾರ ನಡೆಸುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಜಾತಿ ಕಾಲಂನಲ್ಲಿ ಸಮುದಾಯದವರು 'ಲಿಂಗಾಯತ ರಡ್ಡಿ' ಎಂದೇ ಬರೆಸಬೇಕು' ಎಂದು ರಾಜ್ಯ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ವೀರಶೈವ ಲಿಂಗಾಯತ ರಡ್ಡಿ ಸಮಾಜದ ಗೌರವಾಧ್ಯಕ್ಷ,ಶಾಸಕರೂ ಆಗಿರುವ ಜಿ.ಎಸ್.ಪಾಟೀಲ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ಸಂಘಟನೆಯ ರಾಜ್ಯಮಟ್ಟದ ಪದಾಧಿಕಾರಿಗಳು ಮತ್ತು ಪ್ರಮುಖರ ಕಾರ್ಯಕಾರಿಣಿ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು, 'ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ತಿಳಿಸಿದರು.

'ಸಮುದಾಯದ ಪ್ರಗತಿಗೆ ನಾಲ್ಕು ಕಂದಾಯ ವಿಭಾಗಗಳಲ್ಲೂ ನಿವೇಶನ ಖರೀದಿಸಿ, ಮಕ್ಕಳಿಗಾಗಿ ಹಾಸ್ಟೆಲ್ ನಿರ್ಮಿಸುತ್ತೇವೆ. ಹುಬ್ಬಳ್ಳಿಯಲ್ಲಿ ಸಹಕಾರ ಬ್ಯಾಂಕ್ ಸ್ಥಾಪಿಸುತ್ತೇವೆ' ಎಂದರು. ಶಾಸಕ ಸಿ.ಎಸ್.ನಾಡಗೌಡ ಅವರು,'ವೀರಶೈವಲಿಂಗಾಯತ, ಪ್ರತ್ಯೇಕ ಧರ್ಮ ವ್ಯಾಜ್ಯಕ್ಕೆ ನಾವು ಹೋಗಲ್ಲ. ಇರುವ ಸ್ಥಾನ ಉಳಿಸಿಕೊಳ್ಳಲು ಕಾರ್ಯಚಟುವಟಿಕೆ ಹಮ್ಮಿಕೊಳ್ಳುತ್ತೇವೆ' ಎಂದರು. ಶಾಸಕರಾದ ಬಸವರಾಜ ರಾಯರಡ್ಡಿ, ಎಸ್.ಆರ್. ಪಾಟೀಲ, ಹಂಪನಗೌಡ ಬಾದರ್ಲಿ, ಶರಣಗೌಡ ಕಂದಕೂರ, ಅಮರೇಗೌಡ ಬಯ್ಯಾಪುರ, ಸಂಘಟನೆಯ ಅಧ್ಯಕ್ಷ ಶೇಖರಗೌಡ ಪಾಟೀಲ, ಯುವ ಘಟಕದ ರಾಜ್ಯ ಅಧ್ಯಕ್ಷ ಅನಿಲಕುಮಾರ ತೆಗ್ಗಿನಮನಿ ಇದ್ದರು.

# ಆರ್ ಕೈಬಿಡಿ ಹಿ ಚುನಾವಣಾ ಆಯೋಗಕ್ಕೆ ಎಸ್‌ಯುಸಿಐ(ಸಿ) ಒತ್ತಾಯ

**ಧಾರವಾಡ :** ಎಸ್ ಯು ಸಿ ಐ ಕಮ್ಯುನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಸಮಿತಿಯಿಂದ ಇಂದು ನಗರದ ವಿವೇಕಾನಂದ ವೃತ್ತದಲ್ಲಿ ಮತಪಟ್ಟಿಯ ವಿಶೇಷ ತೀವೃತಮ ಪರಿಷ್ಕರಣೆ (ಎಆರ್) ವಿರುದ್ಧ ಪ್ರತಿಭಟನೆ ಮಾಡಲಾಯಿತು. ದೇಶದಲ್ಲಿ ಅತ್ಯಂತ ವಿವಾದಕ್ಕೆ ಒಳಗಾದ ಮತ್ತು ದುಡಿಯುವ ಜನರ ಮೂಲಭೂತ ಹಕ್ಕುಗಳಿಗೆ ಸಂಚಕಾರ ತರುತ್ತಿರುವ ಎಆರ್ ಕೈ ಬಿಡುವಂತೆ ಕೇಂದ್ರ ಚುನಾವಣಾ ಆಯೋಗವನ್ನು ಒತ್ತಾಯಿಸಲಾಯಿತು.

ಈ ಸಂಧರ್ಭದಲ್ಲಿ ಎಸ್ ಯು ಸಿ ಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟರಿಯೆಟ್ ಸದಸ್ಯರಾದ ರಾಮಾಂಜನಪ್ಪ ಆಲ್ದಳ್ಳಿ ಮಾತನಾಡಿ, ದೇಶದಲ್ಲಿ ಅತ್ಯಂತ ವಿವಾದಕ್ಕೆ ಒಳಗಾದಂತಹ ವಿಶೇಷ ತೀವ್ರತಮ ಪರಿಷ್ಕರಣೆ(ಎಆರ್) ಕೋಟ್ಯಾಂತರ ಜನತೆಯಲ್ಲಿ ಆತಂಕ ಮೂಡಿಸಿದೆ. ಮತ ಪಟ್ಟಿಯ ಪರಿಷ್ಕರಣೆಯ ಉದ್ದೇಶ ಬಿಟ್ಟುಹೋದ ಮತದಾರರನ್ನು ಪಟ್ಟಿಯಲ್ಲಿ ಸೇರಿಸಿ ಮತದಾನದ ಹಕ್ಕನ್ನು ಜನತೆಗೆ ನೀಡುವುದು ಆಗಬೇಕೇ ವಿನಃ ಮತದಾನದ ಹಕ್ಕನ್ನು ಕಸಿಯುದಲ್ಲ. ಆದರೆ ಬಿಹಾರದಲ್ಲಿ ನಡೆದ ವಿದ್ಯಮಾನ ಇದಕ್ಕೆ ವಿರುದ್ಧವಾಗಿದೆ. ಬಿಹಾರ ರಾಜ್ಯದಲ್ಲಿ ಇದೇ ನವೆಂಬರ್ ನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ ಇದರ ಪೂರ್ವಭಾವಿಯಾಗಿ ಚುನಾವಣಾ ಆಯೋಗವು ಎಆರ್ ನ ಹೆಸರಿನಲ್ಲಿ ಮತಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಕೈ ಹಾಕಿದೆ. ಈ ಪರಿಷ್ಕರಣೆಯಲ್ಲಿ ಸುಮಾರು 65 ಲಕ್ಷಕ್ಕೂ ಹೆಚ್ಚು ಜನಗಳ ಹೆಸರನ್ನು ಮತ




ಪಟ್ಟಿಯಿಂದ ಕೈ ಬಿಟ್ಟಿರುವುದು ಮತ್ತು ಬದುಕಿರುವವರನ್ನು ಮೃತರು ಎಂದು ಘೋಷಣೆ ಮಾಡಿರುವುದು 65 ಲಕ್ಷ ಜನರ ಬದುಕನ್ನು ಅಯೋಮಯಗೊಳಿಸಿದೆ.

ಇದಲ್ಲದೆ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮತದಾರರ ಚೀಟಿ ಊರ್ಜಿತ ದಾಖಲೆಗಳಲ್ಲ ಎಂದು ಆಯೋಗವು ಆದೇಶ ನೀಡಿದೆ.

ಚುನಾವಣಾಆಯೋಗವುತಾನೇಫೋಟೋ ಲಗತಿಸಿ ನೀಡಿರುವ ಮತದಾರರ ಗುರುತಿನ ಚೀಟಿಯನ್ನುಮೂಲಭೂತದಾಖಲೆಎಂದು ಒಪ್ಪುವುದಿಲ್ಲ ಎಂದಿರುವುದೇ ಬಹುದೊಡ್ಡ ವಿಪರ್ಯಾಸವಾಗಿದೆ. ಪ್ರಪಂಚದ ಬಹುದೊಡ್ಡ ಪ್ರಜಾಪ್ರಭುತ್ವ ದೇಶ ಎಂದು ಬಿಂಬಿಸುವ ಭಾರತ ದೇಶದಲ್ಲಿ ಚುನಾವಣಾ ಆಯೋಗವು ಅಪ್ರಜಾಂತಂತ್ರಿಕವಾಗಿ ಅಮಾನೀಯವಾಗಿ ಈ ದೇಶದ ಪ್ರಜೆಗಳಲ್ಲ ಎಂದುಮುಗ್ಧಜನರನ್ನುಬಿಂಬಿಸುತ್ತಿರುವುದು ಜನ ವಿರೋಧಿ ನಡೆಯಾಗಿದೆ. ವಿಪರ್ಯಾಸವೆಂದರೆ ವಿರೋಧ ಪಕ್ಷಗಳ ನಾಯಕರು ಮತಗಳ್ಳತನವಾಗಿದೆ ಎಂದು ವಿರೋಧ ವ್ಯಕ್ತಪಡಿಸುತ್ತಿದ್ದು, ತಾವು ಅಧಿಕಾರದಲ್ಲಿದ್ದಾಗ ಇದರ ಫಲಾನುಭವಿಗಳೇ ಆಗಿದ್ದಾರೆ. ಚುನಾವಣಾ ಆಯೋಗ ಹಲವು ವರ್ಷಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಇಂತಹ ಅಕ್ರಮಗಳನ್ನು ನಡೆಸುತ್ತಿರುವುದು ದೇಶದ ಜನತೆಗೆ ಪರಿಚಿತ ವಿಷಯವೇ ಆಗಿದೆ. ಚುನಾವಣೆಯಲ್ಲಿ ಮತಗಳ್ಳತನದಲ್ಲಿ ಇಂದಿನ ಯಾವುದೇ ಬಂಡವಾಳಶಾಹಿ ಪಕ್ಷ ಹೊರತಲ್ಲ ಹಾಗೂ ಬಂಡವಾಳಶಾಹಿ ವ್ಯವಸ್ಥೆ ಕೊಳೆತು ಹೋಗಿರುವ ಈ ಸಂದರ್ಭದಲ್ಲಿ ದುಡಿಯುವ ಜನಗಳ ನೈಜ ಸಮಸ್ಯೆಗಳಿಂದ ಜನತೆಯನ್ನು ವಿಮುಕಗೊಳಿಸುವುದೇ ಇದರ ಹುನ್ನಾರಾಗಿದೆ." ಎಸ್ ಐ ಆರ್ ಜಾರಿಯಿಂದ ಜನರ ಮತ ಚಲಾಯಿಸುವ ಮೂಲಭೂತ ಹಕ್ಕು ಕಳೆದುಕೊಳ್ಳುವುದು ಅಷ್ಟೇ ಅಲ್ಲದೆ ದುಡಿಯುವ ಜನಗಳು ತಮ್ಮ ಬದುಕಿನ ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳಲಿದ್ದಾರೆ. ಆದ್ದರಿಂದ ಇದರ ವಿರುದ್ಧ ಬಲಿಷ್ಠ ಹೋರಾಟವನ್ನು ಕಟ್ಟಲು ಜನತೆಮುಂದೆಬರಬೇಕೆಂದುಕರೆನೀಡಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಲಕ್ಷ್ಮಣ ಜಡಗನ್ನವರ ಪ್ರತಿಭಟನೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಇತ್ತೀಚೆಗೆ ಮುಕ್ತಾಯವಾದ ಕೆಲವು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಮತಪಟ್ಟಿಯಲ್ಲಿ ಲಕ್ಷಾಂತರ ನಕಲಿ ಮತದಾರರ ಸೇರೆ??ಡ, ನಕಲಿ ಮತದಾನ, ನಕಲಿ ಮತ್ತು ಅಮಾನ್ಯ ವಿಳಾಸಗಳಿರುವುದು ದೃಢಪಟ್ಟಿದೆ. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಮಂದಿ ವಾಸಿಸಲು ಸಾಧ್ಯವಾಗುವ ಮನೆಯ ವಿಳಾಸದಲ್ಲಿ 80 ಮತದಾರರು ದಾಖಲಾಗಿರುವ, ಒಬ್ಬನೇ ವ್ಯಕ್ತಿ ಹಲವಾರು ಮತಗಟ್ಟೆಗಳ ಪಟ್ಟಿಯಲ್ಲಿ ಇರುವುದು ಇಂತಹ ವಿದ್ಯಾಮಾನಗಳಿಂದ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಜಗಜ್ಜಾಹಿರುಪಡಿಸಿದೆ. ಇದನ್ನು ಜನತೆ ಅರ್ಥ ಮಾಡಿಕೊಂಡು ದಿನನಿತ್ಯ ಅನುಭವಿಸುತ್ತಿರುವ ಸಮಸ್ಯೆಗಳ ವಿರುದ್ಧ ಒಟ್ಟುಗೂಡಿ ಪ್ರತಿಭಟಿಸಬೇಕೆಂದರು.

ಈಪ್ರತಿಭಟನೆಯಲ್ಲಿಜಿಲ್ಲಾಸಮಿತಿಸದಸ್ಯರಾದ ಭುವನಾ ಬಳ್ಳಾರಿ, ದೀಪಾ ಧಾರವಾಡ, ಶರಣು ಗೋನವಾರ, ಭವಾನಿ ಶಂಕರ ಎಸ್ ಗೌಡ, ಮಧುಲತಾ ಗೌಡರ್ ಸೇರಿದಂತೆ ಪಕ್ಷದ ಸದಸ್ಯರುಗಳು, ಬೆಂಬಲಿಗರು, ಹಿತೈಷಿಗಳು ಭಾಗವಹಿಸಿದ್ದರು.

# ಜಾತಿ ಕಾಲಂನಲ್ಲಿ ವಿಶ್ವಕರ್ಮ ಎಂದು ಬರೆಸಿ

## ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ಕೆ.ಪಿ.ನಂಜುಂಡಿ ಸೂಚನೆ



**ಧಾರವಾಡ :** 'ವಿಶ್ವಕರ್ಮ ಸಮಾಜ ದವರು ಜಾತಿಗಣತಿ ಸಂದರ್ಭದಲ್ಲಿ ಜಾತಿ ಕಾಲಂನಲ್ಲಿ ಉಪಜಾತಿಗಳ ಹೆಸರು ನಮೂದಿಸದೆ ವಿಶ್ವಕರ್ಮ ಎಂದು ಬರೆಸಬೇಕು' ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ಕೆ.ಪಿ.ನಂಜುಂಡಿ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ವಿಶ್ವಕರ್ಮ ಸಮಾಜದಲ್ಲಿ 40 ಉಪಜಾತಿಗಳು ಇವೆ. ಪಂಚ ಕುಲಕಸುಬುಗಳನ್ನು ಮಾಡುವರೆಲ್ಲರೂ ವಿಶ್ವಕರ್ಮರು. ಗಣತಿಯಲ್ಲಿ ಉಪಜಾತಿಗಳನ್ನು ನಮೂದಿಸಬಾರದು' ಎಂದರು.

'ರಾಜ್ಯ ಸರ್ಕಾರವು ಜಾತಿಗಣತಿ ಮರು ಸಮೀಕ್ಷೆ ನಡೆಸಲು ಮುಂದಾಗಿದೆ. ಎಲ್ಲ ಸಮಾಜದವರು ಜಾಗೃತರಾಗಿದ್ದು, ನಮ್ಮ ಸಮಾಜದ ವರು ಜಾಗೃತರಾಗಬೇಕು. ಅಂಕಿ,ಅಂಶದಲ್ಲಿಯೂ ನಿರ್ಲಕ್ಷ್ಯಕ್ಕೆ ಒಳಗಾದರೆ ಸವಲತ್ತು ಸಿಗುವುದಿಲ್ಲ' ಎಂದರು. 'ರಾಜ್ಯದಲ್ಲಿ ವಿಶ್ವಕರ್ಮ ಸಮಾಜದವರ ಜನಸಂಖ್ಯೆ 30 ಲಕ್ಷ ಇದೆ. ಆದರೆ, ಎಚ್.ಕಾಂತರಾಜು ಆಯೋಗವು 9 ಲಕ್ಷ ಎಂದು ವರದಿ ನೀಡಿದೆ. ಈ ಸಮೀಕ್ಷೆ ಸರಿಯಾಗಿಲ್ಲ. ಇದನ್ನು ಎಲ್ಲ ಸಮಾಜದವರು ವಿರೋಧಿಸಿದ್ದಾರೆ' ಎಂದರು.

ಏಕದಂಡಗಿಮಠದ ದೊಡ್ಡೇಂದ್ರ ಸ್ವಾಮೀಜಿ, ಪ್ರಣವನಿರಂಜನ ಸ್ವಾಮೀಜಿ, ಗಣೇಶ್ವರ ಸ್ವಾಮೀಜಿ, ಮೌನೇಶ್ವರ ಸ್ವಾಮೀಜಿ, ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಕಾಳಪ್ಪ ಬಡಿಗೇರ, ವಿಠ್ಠಲ ಕಮ್ಮಾರ, ಶ್ರೀಶೈಲ ಸುತಾರ ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State